# ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ,
# ಬಾಗಲಕೋಟ

## ಡಿಪ್ಲೋಮಾ (ತೋಟಗಾರಿಕೆ)

## ಶೈಕ್ಷಣಿಕ ಮಾಹಿತಿ ಹಾಗೂ ನಿಬಂಧನೆಗಳು

**OFFICE OF THE DEAN, POST GRADUATE STUDIES**
**UNIVERSITY OF HORTICULTURAL SCIENCES**
**BAGALKOT- 587 104**

**ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ**

# ಡಿಪ್ಲೋಮಾ (ತೋಟಗಾರಿಕೆ) ಶೈಕ್ಷಣಿಕ ಮಾಹಿತಿ ಹಾಗೂ ನಿಬಂಧನೆಗಳು


ಪ್ರಕಟಣೆಯ ವರ್ಷ : ನವೆಂಬರ್ 2016

ಪ್ರತಿಗಳ ಸಂಖ್ಯೆ : 500

ಸಂಪಾದಕರು : **ಡೀನ್ ಸ್ನಾತಕೋತ್ತರ**
ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ,
ಬಾಗಲಕೋಟ–587104.

ಪ್ರಕಾಶಕರು : **ಡಾ॥ ಡಿ. ಎಲ್. ಮಹೇಶ್ವರ್** ಕುಲಪತಿಗಳು,
ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ,
ಬಾಗಲಕೋಟ–587104.

## ಪರಿವಿಡಿ


| ಕ್ರ. ಸಂ. | ವಿವರ | ಪುಟ. ಸಂ |
|---|---|---|
| 1 | ಶೀರ್ಷಿಕೆ | 1 |
| 2 | ವ್ಯಾಖ್ಯಾನಗಳು | 1 |
| 3 | ಬೋಧನಾ ಮಾಧ್ಯಮ | 4 |
| 4 | ಕೋರ್ಸ್‌ನ ಅವಧಿ | 4 |
| 5 | ಪ್ರವೇಶ ಪ್ರಕ್ರಿಯೆ | 4 |
| 6 | ನೋಂದಣಿ | 9 |
| 7 | ಶುಲ್ಕದ ವಿವರ | 12 |
| 8 | ಮೂಲ ಪಠ್ಯಕ್ರಮ | 17 |
| 9 | ಪ್ರತಿ ಸೆಮಿಸ್ಟರ್‌ದಲ್ಲಿ ಗರಿಷ್ಠ ನೋಂದಣಿ ಮಾಡಬಹುದಾದ ಕೋರ್ಸ್ ಕ್ರೆಡಿಟ್‌ಗಳು | 21 |
| 10 | ಹಾಜರಾತಿ | 22 |
| 11 | ವಿದ್ಯಾರ್ಥಿಗಳ ಮೌಲ್ಯಮಾಪನ | 23 |
| 12 | ಶ್ರೇಯಾಂಕಗಳ ಅಧಿಸೂಚನೆ | 25 |
| 13 | ಪೂರಕ ಪರೀಕ್ಷೆಗಳು | 26 |
| 14 | ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್ ಮುಗಿಸಲು ಕಾಲಾವಧಿ | 27 |
| 15 | ಶಿಷ್ಯವೇತನ(ಸ್ಟೈಪೆಂಡ್) | 28 |
| 16 | ಪರೀಕ್ಷೆಗಳನ್ನು ನಡೆಸುವುದು ಹಾಗೂ ಅನುಚಿತ ಕ್ರಮಗಳನ್ನು ತಡೆಗಟ್ಟುವುದು | 28 |
| 17 | ವಿದ್ಯಾರ್ಥಿಗಳು ಶಿಸ್ತು ಕಾಪಾಡಿಕೊಳ್ಳುವುದು | 30 |
| 18. | ಫಲಿತಾಂಶ ಅನುಮೋದಿಸುವ ಹಾಗೂ ಪ್ರಮಾಣ ಪತ್ರ ನೀಡುವ ಪ್ರಾಧಿಕಾರ | 32 |
| 19. | ತಿದ್ದುಪಡಿ ಅಥವಾ ಫಲಿತಾಂಶ ರದ್ದುಪಡಿಸುವಿಕೆ | 33 |
| 20. | ವಿದ್ಯಾರ್ಥಿ ನಿಲಯ ಸೌಲಭ್ಯ | 33 |
| 21. | ಇತರೆ ವಿಷಯಗಳು | 33 |
| 22. | ಒಟ್ಟಾರೆ ಸರಾಸರಿ ಶ್ರೇಯಾಂಕ ಅಂಶ,ಪರಿವರ್ತನೆ ಕೋಷ್ಟಕ (ಅನುಭಂದ–1) | 36 |

**1. ಶೀರ್ಷಿಕೆ (Title ):**

1.1 ಈ ನಿಯಮಾವಳಿಗಳು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗಳ ಶೈಕ್ಷಣಿಕ ಮಾಹಿತಿ ಹಾಗೂ ನಿಬಂಧನೆಗಳು ಎಂದು ಕರೆಯಲ್ಪಡುವವು.

1.2 ಈ ನಿಬಂಧನೆಗಳು ಡಿಪ್ಲೋಮಾ (ತೋಟಗಾರಿಕೆ) ಪ್ರಮಾಣ ಪತ್ರ ಪಡೆಯಲು ಬೇಕಾದ ಬೋಧನೆಗೆ ಸಂಬಂಧ ಪಟ್ಟಿದ್ದು, 2015–16 ನೆಯ ಶೈಕ್ಷಣಿಕ ಸಾಲಿನಲ್ಲಿ ಹಾಗೂ ನಂತರದ ಶೈಕ್ಷಣಿಕ ಸಾಲಿನಲ್ಲಿ ಈ ಕೋರ್ಸ್‌ಗೆ ದಾಖಲಾಗುವ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತವೆ.

**2. ವ್ಯಾಖ್ಯಾನಗಳು (Definitions) :**

2.1 **ಶೈಕ್ಷಣಿಕ ವರ್ಷ (Academic year )** :

ಎರಡು ಷಣ್ಮಾಸಿಕ (ಸೆಮಿಸ್ಟರ್) ಗಳನ್ನೊಳಗೊಂಡ ಹನ್ನೆರಡು ತಿಂಗಳ ಶೈಕ್ಷಣಿಕ ಅವಧಿ (ಆರು ತಿಂಗಳ ಅವಧಿಗೆ ಒಂದರಂತೆ ಒಟ್ಟು ಎರಡು ಸೆಮಿಸ್ಟರ್ ಗಳನ್ನೊಳಗೊಂಡ ಒಂದು ವರ್ಷದ ಶೈಕ್ಷಣಿಕ ಅವಧಿಯಾಗಿದೆ).

2.2 **ಷಣ್ಮಾಸಿಕ (Semester)** :

ಪರೀಕ್ಷಾ ದಿನಗಳನ್ನು ಸೇರಿಸಿ ಕನಿಷ್ಠ 110 ಬೋಧನಾ ದಿನಗಳನ್ನೊಳಗೊಂಡ 21 ವಾರಗಳ ಅವಧಿಯು ಒಂದು ಸೆಮಿಸ್ಟರ್. ಒಂದು ಶೈಕ್ಷಣಿಕ ವರ್ಷದಲ್ಲಿ ಇಂತಹ ಎರಡು ಸೆಮಿಸ್ಟರ್‌ಗಳು ಇರುವವು.

2.3 **ಪಠ್ಯಕ್ರಮ (Curriculum) :**

ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಪ್ರಮಾಣ ಪತ್ರ ಹೊಂದಲು ವಿಶ್ವವಿದ್ಯಾಲಯವು ರೂಪಿಸಿದ ನಿಗದಿತ ಪಠ್ಯಕ್ರಮದ ಅಧ್ಯಯನಕ್ಕೆ ಒದಗಿಸಿದ ವಿಷಯಗಳು.

2.4 **ವಿಷಯ (Course) :**

ಒಂದು ಸೆಮಿಸ್ಟರ್‌ದ ಬೋಧನಾ ಅವಧಿಯಲ್ಲಿ ಬೋಧಿಸುವ ಆಯಾ ವಿಷಯದ ನಿಗದಿತ ಪಠ್ಯಕ್ರಮದ ಒಂದು ಭಾಗವು “ಕೋರ್ಸ್” ಆಗಿದ್ದು,

ಇದು ನಿಗದಿತ ವಿಷಯ ಸಂಖ್ಯೆ, ಶೀರ್ಷಿಕೆ ಹಾಗೂ ವಿಷಯ ಗುಣಾಂಕ (ಕೋರ್ಸ್ ಕ್ರೆಡಿಟ್) ಹೊಂದಿರುವುದು.

2.5 **ಪಠ್ಯ ಗುಣಾಂಕ (Course Credit) :**

ಒಂದು ಪಠ್ಯದಲ್ಲಿ ಕಾರ್ಯಗತವಾದ ಬೋಧನಾ ವಿವರ ಅಥವಾ ಕೆಲಸವನ್ನು ಕೋರ್ಸ್‌ಕ್ರೆಡಿಟ್ ಸೂಚಿಸುತ್ತದೆ. "ಒಂದು ಬೋಧನಾ ಗುಣಾಂಕ (ಕ್ರೆಡಿಟ್)" ಒಂದು ವಾರದಲ್ಲಿ "ಒಂದು ತಾಸಿನ ಉಪನ್ಯಾಸವನ್ನು" (ಲೆಕ್ಚರ್) ಸೂಚಿಸಿದರೆ, ಒಂದು ಪ್ರಾಯೋಗಿಕ ಪ್ರಯೋಗಾಲಯದಲ್ಲಿ ಅಥವಾ ಕೃಷಿ/ತೋಟಗಾರಿಕೆ ಕ್ಷೇತ್ರಗಳಲ್ಲಿನ $2^1/_2$ ತಾಸುಗಳ ಪ್ರಾಯೋಗಿಕ ಕಾರ್ಯವನ್ನು ಸೂಚಿಸುತ್ತದೆ.

2.6 **ಒಟ್ಟು ಪಠ್ಯ ಗುಣಾಂಕಗಳ ಸಂಖ್ಯೆ**

**(Total number of course credits) :**

ಪ್ರತಿ ಷಣ್ಮಾಸಿಕದಲ್ಲಿ ವಿದ್ಯಾರ್ಥಿಯು ಪಠ್ಯಗಳನ್ನು ನೊಂದಾಯಿಸಿ ಅಭ್ಯಸಿಸುತ್ತಿರುವ ಒಟ್ಟು ವಿಷಯದ ಗುಣಾಂಕಗಳ ಪ್ರಮಾಣವಾಗಿರುವುದು.

2.7 **ಪಠ್ಯ ಶ್ರೇಯಾಂಕ ಅಂಶ (Grade Point of a Course) :**

ಯಾವುದೇ ಒಂದು ಪಠ್ಯದಲ್ಲಿ (ಕೋರ್ಸ್) ವಿದ್ಯಾರ್ಥಿಯು ಪಡೆದ ಶ್ರೇಣಿ ಅಂಕಗಳು ಆ ವಿದ್ಯಾರ್ಥಿಯು ಪರಿಣಿತಿಯುನ್ನು ಫಲಿತಾಂಶ ಸೂಚಿಸುತ್ತದೆ.ಇದನ್ನು 10 ಅಂಕಗಳ ಅಳತೆಗೋಲಿನಲ್ಲಿ ಎರಡು ದಶಾಂಶಗಳವರೆಗಿನ ಅಂಕಿಗಳಲ್ಲಿ ಲೆಕ್ಕಿಸಲಾಗುತ್ತದೆ.ಆ ಪಠ್ಯದಲ್ಲಿ ವಿದ್ಯಾರ್ಥಿಯು ಪರೀಕ್ಷಾ ಮೌಲ್ಯಮಾಪನದಲ್ಲಿ ಪಡೆದ ಒಟ್ಟು ಅಂಕಗಳನ್ನು (100 ಅಂಕಗಳಿಗೆ) 10 ರಿಂದ ಭಾಗಿಸುವುದರಿಂದ ಆಯಾ ಪಠ್ಯದ ಶ್ರೇಯಾಂಕ ಅಂಶ ಪಡೆಯುವುದು.

2.8 **ಫಲಿತಾಂಶ (Result) :**

ಪ್ರತಿ ಷಣ್ಮಾಸಿಕದ (ಸೆಮಿಸ್ಟರ್) ಕೊನೆಯಲ್ಲಿ ಆಯಾ ಪಠ್ಯ (ಕೋರ್ಸ್)ದಲ್ಲಿ ವಿದ್ಯಾರ್ಥಿಯು ಹೊಂದಿದ ಒಟ್ಟಾರೆ ಪರಿಣಿತಿಯನ್ನು "ಫಲಿತಾಂಶ" ಸೂಚಿಸುವುದು. ನೋಂದಣಿ ಮಾಡಿದ ಪ್ರತಿ ಪಠ್ಯದ ಫಲಿತಾಂಶವನ್ನು ಈ ಕೆಳಗಿನಂತೆ ಘೋಷಿಸಲಾಗುವುದು (ನೀಡಲಾಗುವುದು).

| ಶ್ರೇಯಾಂಕ | ಫಲಿತಾಂಶ | ಮೌಲ್ಯ |
|---|---|---|
| 5.0 ಮತ್ತು ಮೇಲ್ಪಟ್ಟು | ಉತ್ತೀರ್ಣ | ಗ್ರೇಡ್ ಅಂಕ(13.6 ರಲ್ಲಿ ವ್ಯಾಖ್ಯಾನಿಸಿದಂತೆ) |
| 5.0 ಕ್ಕಿಂತ ಕಡಿಮೆ (F) (Fail) | ಅನುತ್ತೀರ್ಣ | ಸೊನ್ನೆ |
| ಎಸ್ಎ (SA) (Shortage of Attendance) | ಕಡಿಮೆ ಹಾಜರಾತಿ | ಸೊನ್ನೆ |
| ಎಸ್ (S) (Satisfactory) | ಸಮಾಧಾನಕರ | – |
| ಎ (A) (Absent) | ಅಂತಿಮ ಪತ್ಯ ಪರೀಕ್ಷೆಗೆ ಗೈರು | ಸೊನ್ನೆ |
| ಐಸಿ (IC) (Incomplete) | ಅಪೂರ್ಣ | – |
| ಯುಎಸ್ (US) (Unsatisfactory) | ಅಸಮಾಧಾನಕರ | – |

2.9 **ಕೋರ್ಸ್ ಕ್ರೆಡಿಟ್ ಪಾಯಿಂಟ್ (Course credit Point) :**

ಆಯಾ ಪತ್ಯದ ಗುಣಾಂಕಗಳು (ಕೋರ್ಸ್ ಕ್ರೆಡಿಟ್ಸ್) ವಿದ್ಯಾರ್ಥಿಯು ಪಡೆಯುವ ಶ್ರೇಯಾಂಕ ಅಂಶವನ್ನು (ಗ್ರೇಡ್ ಪಾಯಿಂಟ್) ಗುಣಾಕಾರ ಮಾಡಿ, ಇದನ್ನು ಎರಡು ದಶಾಂಶಗಳವರೆಗೆ ಲೆಕ್ಕಿಸಿ ಸೂಚಿಸಲಾಗುವುದು.

2.10 **ಸರಾಸರಿ ಶ್ರೇಯಾಂಕ ಅಂಶ (Grade Point Average) :**

ಪ್ರತಿ ಷಣ್ಮಾಸಿಕದ (ಸೆಮಿಸ್ಟರ್) ಕೊನೆಗೆ ಪಡೆದ ಒಟ್ಟು ಗುಣಾಂಕಗಳನ್ನು (ಕ್ರೆಡಿಟ್ ಪಾಯಿಂಟ್) ಆಯಾ ಷಣ್ಮಾಸಿಕದಲ್ಲಿ ನೋಂದಣಿ ಮಾಡಿದ ಒಟ್ಟು (ಕೋರ್ಸ್ಕ್ರೆಡಿಟ್ಸ್) ಪತ್ಯ ಗುಣಾಂಕಗಳಿಂದ ಭಾಗಾಕಾರ ಮಾಡಿದಾಗ ಬಂದ ಭಾಗಾಂಶವನ್ನು ಎರಡು ದಶಾಂಶಗಳವರೆಗೆ ಲೆಕ್ಕಿಸಿ ಸೂಚಿಸಲಾಗುವುದು.

2.11 **ಒಟ್ಟಾರೆ ಸರಾಸರಿ ಶ್ರೇಯಾಂಕ ಅಂಶ**

**(Overall Grade Point Average) :**

ಎರಡನೇ ಹಾಗೂ ಕೊನೆಯ ಸೆಮಿಸ್ಟರ್ ಅಂತ್ಯಕ್ಕೆ ಮೊದಲಿನ

ಷಣ್ಮಾಸಿಕಗಳನ್ನೊಳಗೊಂಡಂತೆ ಪಡೆದ ಒಟ್ಟು ಪಠ್ಯ ಗುಣಾಂಕಅಂಶಗಳನ್ನು ಎಲ್ಲಾ ಸೆಮಿಸ್ಟರ್‌ಗಳಲ್ಲಿ ಒಟ್ಟು ನೋಂದಣಿ ಮಾಡಿದ ಪಠ್ಯ ಗುಣಾಂಕಗಳಿಂದ ಭಾಗಾಕಾರ ಮಾಡಿ, ಭಾಗಾಂಶವನ್ನು ಎರಡು ದಶಾಂಶಗಳವರೆಗೆ ಲೆಕ್ಕಿಸಿ ಸೂಚಿಸಲಾಗುವುದು. ಇದು ಆಯಾ ಪಠ್ಯಕ್ಕೆ ನಿಗದಿತವಾದ ಪಠ್ಯಗಳಲ್ಲಿ ಅಭ್ಯರ್ಥಿಯ ಸಾಧನೆಯನ್ನು/ಪರಿಣಿತಿಯನ್ನು ತೋರಿಸುತ್ತದೆ.

2.12 **ಶೇಕಡಾವಾರು ಅಂಕಗಳು (Percentage of marks) :**

ವಿದ್ಯಾರ್ಥಿಯು ಆಯಾ ಕೋರ್ಸ್‌ನಲ್ಲಿ ಪಡೆದ ಒಟ್ಟಾರೆ ಸರಾಸರಿ ಶ್ರೇಯಾಂಕ ಅಂಶವನ್ನು (OGPA) 10 ರಿಂದ ಗುಣಾಕಾರ ಮಾಡಿ, ಬಂದಿದ್ದನ್ನು ಎರಡು ದಶಾಂಶಗಳವರೆಗೆ ಲೆಕ್ಕಿಸಿ ಸೂಚಿಸಲಾಗುವುದು. ಒಟ್ಟಾರೆ ಸರಾಸರಿ ಶ್ರೇಣಿ ಅಂಕಗಳನ್ನು (10 ಅಂಕಗಳ ಅಳತೆಗೋಲು) ಶೇಕಡಾವಾರು ಅಂಕಗಳಿಗೆ ಪರಿವರ್ತಿಸಲು 10 ರಿಂದ ಗುಣಾಕಾರ ಮಾಡುವುದು. ಪರಿವರ್ತಿಸುವ ಸೂಚಿಪಟ್ಟಿಯನ್ನು ಅನುಬಂಧ–1 ರಲ್ಲಿ ಕೊಡಲಾಗಿದೆ.

3. **ಭೋದನಾ ಮಾಧ್ಯಮ (Medium of Instruction ) :**

ಡಿಪ್ಲೋಮಾ(ತೋಟಗಾರಿಕೆ) ಕೋರ್ಸ್‌ಗಳ ಭೋದನೆಯು ಕನ್ನಡ ಮಾಧ್ಯಮದಲ್ಲಿದ್ದು ಶಿಕ್ಷಣ ಕ್ರಮವು ಸೆಮಿಸ್ಟರ್ ಪದ್ಧತಿಯಾಗಿರುತ್ತದೆ.

4. **ಡಿಪ್ಲೋಮಾ (ತೋಟಗಾರಿಕೆ) ಸಾಮಾನ್ಯ ಅವಧಿ (Course duration) :**

ಡಿಪ್ಲೋಮಾ (ತೋಟಗಾರಿಕೆ)ಯ ಸಾಮಾನ್ಯ ನಿಗದಿತ ಅವಧಿ ಎರಡು ವರ್ಷ(ನಾಲ್ಕು ಸೆಮಿಸ್ಟರ್) ಗಳನ್ನು ಒಳಗೊಂಡಿರುತ್ತದೆ. ಗರಿಷ್ಠ ಅವಧಿ ನಾಲ್ಕು ವರ್ಷ ಅಥವಾ ಎಂಟು ಸೆಮಿಸ್ಟರ್‌ಗಳಾಗಿರುವುದು.

5. **ಪ್ರವೇಶ ಪ್ರಕ್ರಿಯೆ (Admission procedure) :**

5.1 **ಪ್ರವೇಶಕ್ಕೆ ಶೈಕ್ಷಣಿಕ ಅರ್ಹತೆ ((Eligibility for admission):**

ಡಿಪ್ಲೋಮಾ(ತೋಟಗಾರಿಕೆ) ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

5.2 **ಅಭ್ಯರ್ಥಿಗಳಆಯ್ಕೆ (Candidates selection):**

ಡಿಪ್ಲೋಮಾ(ತೋಟಗಾರಿಕೆ) ಕೋರ್ಸ್‌ಗಳಿಗೆ ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಹಾಗೂ ರೋಸ್ಟರ್ ಪದ್ದತಿ ಆಧರಿಸಿ ಅಭ್ಯರ್ಥಿಗಳಆಯ್ಕೆ ಮಾಡಲಾಗುವುದು.

5.3 **ಸೀಟುಗಳ ಮೀಸಲಾತಿ (Reservation of seats) :**

ಅಭ್ಯರ್ಥಿಗಳನ್ನು ಡಿಪ್ಲೊಮಾ(ತೋಟಗಾರಿಕೆ) ಕೋರ್ಸ್‌ಗೆ ಆಯ್ಕೆ ಮಾಡುವಾಗ ಈಕೆಳಗಿನಂತೆ ಮೀಸಲಾತಿ ಅನುಸರಿಸಲಾಗುವುದು.

ಕರ್ನಾಟಕ ಸರಕಾರದ ಆದೇಶದಂತೆ ವರ್ಟಿಕಲ್ ಮೀಸಲಾತಿ ಪದ್ದತಿಯನ್ನು ಅನುಸರಿಸಲಾಗುವುದು.ಸರಕಾರದ ಆದೇಶ ಡಬ್ಲೂಎಲ್/251/ಬಿಸಿಎ/84 ದಿನಾಂಕ : 31–1–1995 ರ ಪ್ರಕಾರ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಆದೇಶಗಳಂತೆಎಸ್‌ಸಿ, ಎಸ್.ಟಿ, ಪ್ರ.ವರ್ಗ–1,2ಎ, 2ಬಿ, 3ಎ ಮತ್ತು 3ಬಿ ವರ್ಗಗಳಿಗೆ ಮೀಸಲಾತಿ ಅನುಸರಿಸಲಾಗುವುದು.

**ಟಿಪ್ಪಣಿ–1 :** ಸರಕಾರಿ ಆದೇಶ ಸಂ. ಎಸ್‌ಡಬ್ಲೂಡಿ/225/ಬಿಸಿಎ/2000 ದಿ. 30–3–2002ರ ಅನ್ವಯ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದಂತೆ (ಹೊಸ ಸಮಗ್ರ ಮೇಲುಸ್ಥರ ಕಾರ್ಯ ನೀತಿ) ಈ ಕೆಳಗೆ ಸೂಚಿಸಲಾದ ಅಭ್ಯರ್ಥಿಗಳು 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಲ್ಲಿ ಪ್ರವೇಶಾತಿ ಪಡೆಯಲು ಅರ್ಹರಾಗಿರುವುದಿಲ್ಲ.

i) ಮೇಲಿನ ಸರಕಾರಿ ಆದೇಶದ ಟಿಪ್ಪಣಿ–1 ರಡಿಯಲ್ಲಿ ಸೂಚಿಸಿದವರ ಮಗ/ಮಗಳು.

ii) ಅಭ್ಯರ್ಥಿ ಮತ್ತು ಪೋಷಕರು/ಪಾಲಕರಲ್ಲಿ ಯಾರಾದ ರೊಬ್ಬರು ಗುಂಪು–ಎ (28,100–50,100) ಅಥವಾ ಗುಂಪು–ಬಿ(ವೇತನ ಶ್ರೇಣಿ ರೂ.21,600 ರಿಂದ 40,050) ಅಧಿಕಾರಿಯಾಗಿ ಸರ್ಕಾರಿ ಸೇವೆಯಲ್ಲಿದ್ದರೆ ಅಥವಾ ಸಮಾನಾಂತರ ಹುದ್ದೆಯನ್ನು ಸಾರ್ವಜನಿಕ ಕ್ಷೇತ್ರ ಸಂಸ್ಥೆಯಲ್ಲಿ ಅಥವಾ ಖಾಸಗಿ ಉದ್ಯಮ/ಸಂಸ್ಥೆಯಲ್ಲಿ ತತ್ಸಮಾನ

ಹುದ್ದೆಯಲ್ಲಿದ್ದು ಗ್ರೂಪ್ **'ಬಿ'** ಅಧಿಕಾರಿಗಿಂತಕಡಿಮೆ ಇಲ್ಲದಂತೆ (ವೇತನ ಶ್ರೇಣಿ ರೂ.21,600/– ರಿಂದ 40,050/–) ವೇತನ ಪಡೆಯುತ್ತಿದ್ದಲ್ಲಿ.

iii) ಅಭ್ಯರ್ಥಿಮತ್ತು ಅವನ/ಅವಳ ತಂದೆ–ತಾಯಿ/ಪೋಷಕರ ವಾರ್ಷಿಕ ಆದಾಯವು ಸರಕಾರದ ನಿಯಮಾನುಸಾರಕ್ಕಿಂತ ಹೆಚ್ಚಾಗಿದ್ದರೆ,

iv) ಅಭ್ಯರ್ಥಿ ಅಥವಾ ಅವನ/ಅವಳ ತಂದೆ/ತಾಯಿ/ಪೋಷಕರು ಕರ್ನಾಟಕ ಭೂಸುಧಾರಣೆ ಅಧಿನಿಯಮ 1961 ರಲ್ಲಿ ಸೂಚಿಸಿದಂತೆ10 ಘಟಕಗಳು ಅಥವಾ 20 ಎಕರೆ ಪ್ಲಾಂಟೇಷನ್ ಭೂಮಿಗಿಂತ ಹೆಚ್ಚಿನ ಕೃಷಿ ಭೂಮಿಯನ್ನು ಹೊಂದಿದ್ದರೆ.

**ಟಿಪ್ಪಣಿ–2:** ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳಲ್ಲಿ (ಪ್ರ.ವರ್ಗ–1, 2ಎ, 2ಬಿ,3ಎ ಮತ್ತು 3ಬಿ)

ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಕೆಳಗೆ ಸೂಚಿಸಿದ ಸೂಕ್ತ ನಮೂನೆಗಳಲ್ಲಿ ಪ್ರಮಾಣ ಪತ್ರ ಸಲ್ಲಿಸಬೇಕು.

i) ಪರಿಶಿಷ್ಟ ಜಾತಿ/ಪಂಗಡಗಳವರ ಜಾತಿ ಪ್ರಮಾಣ ಪತ್ರ – ನಮೂನೆ – ಡಿ

ii) ಪ್ರವರ್ಗ–1 ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ – ನಮೂನೆ – ಇ

iii)ಇತರೆ ಹಿಂದುಳಿದ ವರ್ಗಗಳ ಜಾತಿ–ಆದಾಯ ಪ್ರಮಾಣ ಪತ್ರ – ನಮೂನೆ – ಎಫ್

**ಟಿಪ್ಪಣಿ–3:** i) ವಿಶೇಷ ಪ್ರವರ್ಗಗಳಡಿಯಲ್ಲಿ ಎಂದರೆ ಎನ್‌ಸಿಸಿ/ಎನ್‌ಎಸ್‌ಎಸ್/ ಕ್ರೀಡೆಗಳು/ಸ್ಕೌಟ್ಸ್ ಮತ್ತು ಗೈಡ್/ರಕ್ಷಣಾ ಸೇವೆ/ಮಾಜಿ ಯೋಧರು/ ಆಂಗ್ಲೋ ಇಂಡಿಯನ್ಸ್/ದೈಹಿಕ ಅಂಗವಿಕಲರು ಅಡಿಯಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸೂಕ್ತ ದಾಖಲೆ ಪತ್ರಗಳನ್ನು ಸಲ್ಲಿಸಬೇಕು. ಇವುಗಳನ್ನು ಸೂಕ್ತ ಪ್ರಾಧಿಕಾರದವರಿಂದ ಪರಿಶೀಲನೆಗೆ ಒಳಪಡಿಸಲಾಗುವುದು. ದೈಹಿಕ ವಿಕಲತೆ ಪ್ರವರ್ಗದಡಿಯಲ್ಲಿನ

ಅಭ್ಯರ್ಥಿಗಳು ಶೇಕಡಾ 40 ಕ್ಕಿಂತ ಕಡಿಮೆ ಅಂಗವಿಕಲತೆಯನ್ನು ಹೊಂದಿದ್ದರೆ ಅವರನ್ನುಆಯ್ಕೆ ಮಾಡಲಾಗುವುದಿಲ್ಲ.

ii) ಗ್ರಾಮೀಣ ವಿದ್ಯಾರ್ಥಿಗಳಿಗೆ ಹಾಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಸರ್ಕಾರಿ ಆದೇಶದನ್ವಯ ಮೀಸಲಾತಿ ನೀಡಲಾಗುವುದು.

iii) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ ಸರ್ಕಾರಿ ಆದೇಶದನ್ವಯ (ಸಂಖ್ಯೆ : ಡಿಪಿಎಆರ್43ಹೆಚ್‌ಕೆಸಿ2013, ಬೆಂಗಳೂರು ದಿನಾಂಕ:29.01.2014 ಮತ್ತು ಸಂಖ್ಯೆ : ಸಿಆಸುಇ 05ಹೈಕಶಿ 2014 ಬೆಂಗಳೂರು ದಿನಾಂಕ : 18.03.2014 ರನ್ವಯ) ಮೀಸಲಾತಿ ನೀಡಲಾಗುವುದು. ಈ ಮೀಸಲಾತಿ ಬಯಸುವ ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಸಹಾಯಕ ಆಯುಕ್ತರಿಂದ (ನಮೂನೆ–ಎ) ಪ್ರಮಾಣ ಪತ್ರ ಪಡೆದು ಸಲ್ಲಿಸುವುದು.

iv) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಕೃಇ22–ಕೃವಿವಿ2014 ಬೆಂಗಳೂರು ದಿನಾಂಕ : 21.08.2014ರಂತೆ ರೈತರ ಹಾಗೂ ಕೃಷಿ ಕಾರ್ಮಿಕ ಮಕ್ಕಳಿಗೆ ಪ್ರವೇಶಾತಿಯಲ್ಲಿ ಶೇಕಡಾ 40% ರಷ್ಟು ಮೀಸಲಾತಿ ಯನ್ನು ನೀಡಲಾಗುವುದು, ಈ ಮೀಸಲಾತಿ ಬಯಸುವ ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ತಹಶೀಲ್ದಾರರಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು.

**ಷರಾ** : ಈ ಮೇಲಿನ ಮೀಸಲಾತಿಗಳಿಗೆ ಸಂಬಂಧಿಸಿದ ಷರತ್ತುಗಳು ಕಾಲಕಾಲಕ್ಕೆ ಸರಕಾರದಿಂದ ಹೊರಡಿಸುವ/ಬದಲಾಗುವ ಅಧಿಸೂಚನೆಗಳಿಗೆ ಒಳಪಟ್ಟಿರುತ್ತದೆ.

## 5.4 ಪ್ರವೇಶಕ್ಕೆ ಅರ್ಜಿ ನಮೂನೆ

**(Application format for admission ) :**

ಈ ಕೋರ್ಸಿನ ಅಧ್ಯಯನಕ್ಕೆ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಕುಲಸಚಿವರು, ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಇವರ ಕಛೇರಿಯಿಂದ ಖುದ್ದಾಗಿ ಅಥವಾ ತೋವಿವಿ ವೆಬ್‌ಸೈಟ್ (ಜಾಲತಾಣ) www.uhsbagalkot.edu.in ದಿಂದಲೂ ಪಡೆಯಬಹುದು. ನಿಗದಿತ ಶುಲ್ಕವನ್ನು ಹಣಕಾಸು ನಿಯಂತ್ರಣಾಧಿಕಾರಿಗಳು, ತೋ.ವಿ.ವಿ, ಬಾಗಲಕೋಟ (The Comptroller, UHS, Bagalkot) ಇವರ ಹೆಸರಿನಲ್ಲಿ ಚಲನ್ ತುಂಬಿ (ಶುಲ್ಕ ಪಾವತಿಸಿ) ಭರ್ತಿ ಮಾಡಿದ ಅರ್ಜಿಯನ್ನು ಪ್ರಕಟಣೆಯಲ್ಲಿ ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಕುಲಸಚಿವರು, ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಇವರ ಕಛೇರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು.

## 5.5 ಪ್ರವೇಶ ವಿಧಾನ (Admission process) :

5.5.1 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ನಿಗದಿಪಡಿಸಿದ ಮೀಸಲಾತಿಯಂತೆ ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ/ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಪ್ರಕಾರ ಪ್ರವೇಶ ನೀಡಲಾಗುವುದು.

5.5.2 ಅಭ್ಯರ್ಥಿಗಳ ಪ್ರವೇಶವು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ :

i) ಅರ್ಜಿಯಲ್ಲಿ ನಮೂದಿಸಿರುವಂತೆ ಎಲ್ಲ ವಿವರವನ್ನು ಹಾಗೂ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಅಂಕಪಟ್ಟಿಯ ಮೂಲ ದಾಖಲಾತಿಯ ಪರಿಶೀಲನೆ ಮಾಡುವುದು.

ii) ನಿಗದಿಪಡಿಸಿದ ಕೇಂದ್ರಗಳಲ್ಲಿ ಸೀಟುಗಳ ಲಭ್ಯತೆ ಪರಿಗಣನೆ.

iii) ಕೋರ್ಸ್‌ಗೆ ನಿಗದಿಪಡಿಸಿದ ಶುಲ್ಕವನ್ನು ನಿಗದಿತ ಸಮಯದೊಳಗಾಗಿ ವಿಶ್ವವಿದ್ಯಾಲಯಕ್ಕೆ ಸಂದಾಯಮಾಡುವುದು.

iv) ನಿಗದಿಗೊಳಿಸಿದ ದಿನಾಂಕದೊಳಗೆ ಆಯ್ಕೆಯಾದ ಕೋರ್ಸ್‌ಗೆ ನೋಂದಣಿ ಮಾಡಿಸುವುದು ಹಾಗೂ

v) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿದ ಶೈಕ್ಷಣಿಕ ಸಂಸ್ಥೆಯಿಂದ ವರ್ಗಾವಣೆ ಪತ್ರ ಪಡೆದು ಸಲ್ಲಿಸುವುದು.

5.5.3 ಮೀಸಲಾತಿಗೆ ಒಳಪಟ್ಟ ಸೀಟುಗಳಿಗೆ ಪ್ರವೇಶವನ್ನು ಕಟ್ಟುನಿಟ್ಟಾಗಿ ಆಯಾ ವರ್ಗಗಳಲ್ಲಿನ ಅಭ್ಯರ್ಥಿಗಳನ್ನು ಮೆರಿಟ್ ಆಧಾರದಲ್ಲಿ ಆಯ್ಕೆಮಾಡಿ ಪ್ರವೇಶ ನೀಡಲಾಗುವುದು. ಈ ಮೀಸಲಾತಿ ವರ್ಗಗಳಲ್ಲಿ ಅಭ್ಯರ್ಥಿಗಳ ಕೊರತೆಯಿಂದ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ, ಇಂತಹ ಸೀಟುಗಳು ಸಾಮಾನ್ಯ ವರ್ಗಕ್ಕೆ ವರ್ಗಾವಣೆಯಾದವುಗಳೆಂದು ತಿಳಿದು ಸಾಮಾನ್ಯ ವರ್ಗದಲ್ಲಿನ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.

## 6. ನೋಂದಣಿ (Registration):

### 6.1 ವಿಶ್ವವಿದ್ಯಾಲಯದಲ್ಲಿ ಮೊದಲನೆ ಬಾರಿಗೆ ನೊಂದಣಿ : (Registration for the first time in the university)

6.1.1 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ನೋಂದಣಿಯಾದ ನಂತರವೇ ಪ್ರವೇಶ ಪ್ರಕ್ರಿಯೆಯು ಪೂರ್ಣವಾಗುವುದು. ಆದ್ದರಿಂದ ಕೋರ್ಸಿಗೆ ಪ್ರವೇಶ ಪಡೆದ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗಿ ನೋಂದಣಿ ಮಾಡಿಸಬೇಕು.

6.1.2 ಮೊದಲನೆಯ ಸೆಮಿಸ್ಟರ್‌ದಲ್ಲಿ ನಿಗದಿತ ದಿನಾಂಕದೊಳಗೆ ಕೋರ್ಸ್‌ಗೆ ನೋಂದಣಿ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಯ ಆಯ್ಕೆ ರದ್ದಾಗುವುದು. ವಿಶ್ವವಿದ್ಯಾಲಯದಿಂದ ಪ್ರವೇಶ ಪತ್ರ ಪಡೆದ ಅಭ್ಯರ್ಥಿಯು ನಿಗದಿಪಡಿಸಿದ ಕೊನೆಯ/ಅಂತಿಮ ದಿನಾಂಕದೊಳಗಾಗಿ ಎಲ್ಲಾ ಶುಲ್ಕವನ್ನು ಪಾವತಿಮಾಡಿ ಸೆಮಿಸ್ಟರ್ ಪ್ರಾರಂಭದ ಮೊದಲನೆಯ ದಿನದಂದು ನೋಂದಣಿಗಾಗಿ ಸಂಬಂಧಪಟ್ಟ ಶಿಕ್ಷಣ ಕೇಂದ್ರಗಳಲ್ಲಿ ಹಾಜರಿರಬೇಕು.

6.1.3 ಹೊಸದಾಗಿ ಪ್ರವೇಶ ಪಡೆದ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸಂಬಂಧಿಸಿದ ಡೀನ್‌ರು ಪರಿಚಯ (ಓರಿಯಂಟೇಶನ್) ಕಾರ್ಯಕ್ರಮ ಹಮ್ಮಿಕೊಂಡು ಕೋರ್ಸ್‌ಗಳ ಬಗ್ಗೆ ವಿವರ/ಮಾಹಿತಿ ನೀಡುವರು. ಕಾಯ್ದಿಟ್ಟ ಅಭ್ಯರ್ಥಿಗಳ ನೋಂದಣಿ ಅವಧಿಯು ಸೆಮಿಸ್ಟರ್ ಪ್ರಾರಂಭವಾದ ನಾಲ್ಕು ವಾರಗಳ ನಂತರ ಕೊನೆಗೊಳ್ಳುವುದು. ನೋಂದಣಿಯ ನಿಗದಿತ ಅವಧಿಯ ನಂತರ ಪ್ರವೇಶಪಡೆದ ಅಭ್ಯರ್ಥಿಯ ಹಾಜರಾತಿಯನ್ನು ಆತನು/ಅವಳು ನೋಂದಣಿ ಮಾಡಿಸಿದ ದಿನಾಂಕದಿಂದ ಪರಿಗಣಿಸಲಾಗುವುದು.

6.1.4 ಪ್ರವೇಶ ಪಡೆದ ಅಭ್ಯರ್ಥಿಯು ಮೊದಲನೆ ಸೆಮಿಸ್ಟರ್‌ದಲ್ಲಿ ಅಭ್ಯಸಿಸುವುದು ಕಡ್ಡಾಯ, ಯಾವುದೇ ಕಾರಣಕ್ಕೂ ಮೊದಲ ಸೆಮಿಸ್ಟರ್‌ದಲ್ಲಿ ಗೈರುಹಾಜರಾದಲ್ಲಿ ಅವರ ಪ್ರವೇಶವು ರದ್ದಾಗುವುದು. ಮೊದಲ ಸೆಮಿಸ್ಟರ್‌ದಲ್ಲಿ ಅಭ್ಯರ್ಥಿಯು ಕನಿಷ್ಟ ಒಂದು ವಿಷಯದಲ್ಲಿ ಕಡಿಮೆ ಹಾಜರಾತಿ, ಅಸಮಾಧಾನಕರ ಅಥವಾ ಅನುತ್ತೀರ್ಣ(ಫೇಲ್) ಈ ಶ್ರೇಣಿಗಳನ್ನು ಹೊರತುಪಡಿಸಿ ಉಳಿದ ಶ್ರೇಣಿಯನ್ನು ಪಡೆದು ಪಾಸಾಗಬೇಕು, ಇಲ್ಲದಿದ್ದಲ್ಲಿ ಅಂತಹವರ ಪ್ರವೇಶವು ರದ್ದಾಗುವುದು.

## 6.2 ನಂತರದ ಷಣ್ಮಾಸಿಕಗಳಿಗೆ ನೋಂದಣಿ ಕ್ರಮ (Registration in subsequent semesters):

6.2.1 ಪ್ರತಿ ಷಣ್ಮಾಸಿಕ (ಸೆಮಿಸ್ಟರ್) ಕೊನೆಗೊಳ್ಳುವ 3 ವಾರಗಳ ಮೊದಲೇ ಮುಂದಿನ ಷಣ್ಮಾಸಿಕಗೆ ನೋಂದಣಿ ಪ್ರಕ್ರಿಯೆ ಆರಂಭವಾಗುವುದು.

6.2.2 ಷಣ್ಮಾಸಿಕ (ಸೆಮಿಸ್ಟರ್) ಪ್ರಾರಂಭದ ದಿನವು ಆ ಷಣ್ಮಾಸಿಕಗೆ ನೋಂದಣಿ ಮಾಡಿಸುವ ಕೊನೆಯ ದಿನವಾಗಿರುವುದು. ಆದಾಗ್ಯೂ ನಿಗದಿತ ಕೊನೆಯ ದಿನಾಂಕದ ನಂತರ ಗರಿಷ್ಠ ಆರು ಕೆಲಸದ ದಿನಗಳವರೆಗೆ ಪ್ರತಿದಿನಕ್ಕೆ ರೂಪಾಯಿ 10/- ರಂತೆ ದಂಡ ಶುಲ್ಕದೊಂದಿಗೆ ನೋಂದಣಿ ಮಾಡಿಸಲು ಅವಕಾಶ ನೀಡಲಾಗಿದೆ.

6.2.3 ಪ್ರತಿ ಷಣ್ಮಾಸಿಕ (ಸೆಮಿಸ್ಟರ್) ನೋಂದಣಿ ಮಾಡಿಸಲು ವಿದ್ಯಾರ್ಥಿಯು ಸ್ವಯಂ ಉಪಸ್ಥಿತರಿರಬೇಕು ಹಾಗೂ ನೋಂದಣಿ ಅಧಿಕಾರಿಗಳು ಗುರುತಿನ ಚೀಟಿ ಕೇಳಿದಲ್ಲಿ ವಿದ್ಯಾರ್ಥಿಗಳು ಒದಗಿಸಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ವಿದ್ಯಾರ್ಥಿಯ ಅನುಪಸ್ಥಿತಿಯಲ್ಲಿ ಸಂಬಂಧಪಟ್ಟ ಡೀನ್‌ರವರ ಶಿಫಾರಸ್ಸಿನಂತೆ ವಿಶ್ವವಿದ್ಯಾಲಯದ ಅನುಮತಿ ಪಡೆದು ವಿದ್ಯಾರ್ಥಿಯ ಪ್ರತಿನಿಧಿ ನೋಂದಣಿ ಮಾಡಿಸಬಹುದು.

6.2.4 ಪ್ರತಿ ಷಣ್ಮಾಸಿಕದ (ಸೆಮಿಸ್ಟರ್) ಪ್ರಾರಂಭದಲ್ಲಿ ವಿದ್ಯಾರ್ಥಿಗಳು ನೋಂದಣಿ ಮಾಡಿಸುವ ಪೂರ್ವದಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಾದ ವಸತಿ ನಿಲಯ, ಗ್ರಂಥಾಲಯ, ಇತ್ಯಾದಿಗಳಲ್ಲಿ ಇರುವ ಬಾಕಿಯನ್ನು ತೀರಿಸಿ "ಬೇಬಾಕಿ" (No Dues) ಪ್ರಮಾಣ ಪತ್ರ ಪಡೆಯುವುದು.

6.2.5 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಆಯ್ಕೆಯಾಗಿ ಮೊದಲ ಷಣ್ಮಾಸಿಕದಲ್ಲಿ (ಸೆಮಿಸ್ಟರ್) ವಿವಿಧ ಕೋರ್ಸ್‌ಗಳಿಗೆ ನೋಂದಣಿ ಮಾಡಿದ ವಿದ್ಯಾರ್ಥಿಗಳು ಷಣ್ಮಾಸಿಕ ಮಧ್ಯದಲ್ಲಿ ಬಿಟ್ಟು ಹೋಗುವಂತಿಲ್ಲ. ಹಾಗೇನಾದರು

ವಿದ್ಯಾರ್ಥಿಯು ಬಿಟ್ಟು ಹೋದಲ್ಲಿ ಅಥವಾ ಅಭ್ಯಾಸವನ್ನು ಮೊಟಕುಗೊಳಿಸಿದಲ್ಲಿ ಸದರಿ ಕೋರ್ಸ್‌ಗೆ ವಿದ್ಯಾರ್ಥಿಯ ಆಯ್ಕೆಯು ರದ್ದಾಗುವುದರ ಜೊತೆಗೆ ವಿದ್ಯಾರ್ಥಿಯು ಪಾವತಿಸಿದ ಯಾವುದೇ ಶುಲ್ಕವನ್ನು ಮರುಪಾವತಿ ಮಾಡುವುದಿಲ್ಲ.

6.2.6 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ದಾಖಲಾದ ವಿದ್ಯಾರ್ಥಿಯು ಮೊದಲನೇ ಷಾಣ್ಮಾಸಿಕದಲ್ಲಿ (ಸೆಮಿಸ್ಟರ್) ಕನಿಷ್ಠ ಒಂದಾದರೂ 'ಕೋರ್ಸ್' ನಲ್ಲಿ SA (ಕಡಿಮೆ ಹಾಜರಾತಿ), F (ಅನುತ್ತೀರ್ಣ), US (ಅಸಮಾಧಾನಕರ) ಈ ಚಿನ್ಹೆಗಳನ್ನು ಹೊರತುಪಡಿಸಿ, ಉಳಿದ ಚಿನ್ಹೆಗಳೊಂದಿಗೆ ಪೂರ್ಣಗೊಳಿಸಲು ವಿಫಲವಾದಲ್ಲಿ ಅಂತಹ ವಿದ್ಯಾರ್ಥಿಯ ಆಯ್ಕೆ ರದ್ದಾಗುವುದು.

6.2.7 ಪ್ರವೇಶ ಹೊಂದಿದ ನಂತರ, ವಿದ್ಯಾರ್ಥಿಯು ಕೋರ್ಸ್ ಅವಧಿಯ ಮಧ್ಯದಲ್ಲಿಯೇ ಅಭ್ಯಾಸವನ್ನು ತಾತ್ಕಾಲಿಕವಾಗಿ ಮೊಟಕುಗೊಳಿಸಿದಲ್ಲಿ ಅಥವಾ ತನ್ನ ಪ್ರವೇಶವನ್ನು ರದ್ದುಗೊಳಿಸಲು ಬಯಸಿದಲ್ಲಿ, ಅಂತಹ ವಿದ್ಯಾರ್ಥಿಯು ವಿಶ್ವವಿದ್ಯಾಲಯದ ಎಲ್ಲ ಬಾಕಿಯನ್ನು ತೀರಿಸಬೇಕಾಗುವುದು. ವಿದ್ಯಾರ್ಥಿಯು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಂದ (ಉದಾ: ವಸತಿಗೃಹ, ಗ್ರಂಥಾಲಯ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ಇತ್ಯಾದಿ) ಪಡೆದ 'ಬೇಬಾಕಿ' ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಡೀನ್‌ರವರು/ಮುಖ್ಯಸ್ಥರು (ಸಂಯೋಜಕರು) ಪರಿಶೀಲಿಸಿ ದೃಢಪಡಿಸಿದ ನಂತರ ಇಂತಹ ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯಕ್ಕೆ ಪರವಾನಿಗೆಗಾಗಿ ಕಳುಹಿಸಬೇಕು.

## 6.3 ಸಲಹಾ ಪದ್ಧತಿ (Counselling system) :

6.3.1 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಸೂಕ್ತ ಗುಂಪುಗಳನ್ನಾಗಿ ವಿಂಗಡಿಸಿ, ಪ್ರತಿ ಗುಂಪಿಗೆ ಒಬ್ಬ ಶಿಕ್ಷಕರನ್ನು ಸಲಹೆಗಾರರನ್ನಾಗಿ ನೇಮಿಸಲಾಗುವುದು. ಪ್ರತಿ ಅಭ್ಯರ್ಥಿಯು ಕೋರ್ಸ್‌ಗೆ ಸೇರಿದ ನಂತರ ಕೋರ್ಸ್‌ಗಳ ನೋಂದಣಿಯನ್ನು ತಮ್ಮ ಸಲಹೆಗಾರ ಶಿಕ್ಷಕರ ಸಲಹೆ ಸೂಚನೆಯಂತೆ ಸೂಕ್ತವಾಗಿ ಪೂರ್ಣಗೊಳಿಸುವರು.ಶಿಕ್ಷಕ ಸಲಹೆಗಾರರು ತಮ್ಮ ಗುಂಪಿನ ಅಭ್ಯರ್ಥಿಗಳಿಗೆ ಅವರ ಅಭ್ಯಾಸ ಕ್ರಮದ ಯೋಜನೆಯಲ್ಲಿ ಸೂಕ್ತ ಸಲಹೆಗಳೊಂದಿಗೆ ಸಹಾಯ ಮಾಡುವರು.

6.3.2 ಶಿಕ್ಷಕ ಸಲಹೆಗಾರರು ವಿದ್ಯಾರ್ಥಿಗಳೊಂದಿಗೆ ನಿಕಟ ಸಂಪರ್ಕ ಹಾಗೂ ಸಂಬಂಧ ಹೊಂದಿ, ನಿಗದಿತ ಅವಧಿಯಲ್ಲಿ ವಿದ್ಯಾರ್ಥಿಗಳ ಸಭೆ ನಡೆಸಿ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಶೀಲಿಸಿ, ಸಂಬಂಧಿಸಿದ ಶಿಕ್ಷಕರೊಂದಿಗೆ/ಡಿಪ್ಲೋಮಾ ಸಂಯೋಜಕರೊಂದಿಗೆ ಅಥವಾ ಡೀನ್‌ರೊಂದಿಗೆ ಚರ್ಚಿಸಿ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಸೂಚಿಸುವರು.

6.3.3 ಶಿಕ್ಷಕ ಸಲಹೆಗಾರರು ತಮ್ಮ ಗುಂಪಿನ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿವರವನ್ನು ಪ್ರತಿ ಸೆಮಿಸ್ಟರದಲ್ಲಿ (ಷಣ್ಮಾಸಿಕದಲ್ಲಿ) ನೋಂದಣಿ ಮಾಡಿದ ಕೋರ್ಸ್‌ಗಳ ವಿವರ, ಪಡೆದ ಗ್ರೇಡ್‌ಗಳ ಮಾಹಿತಿಯನ್ನು ವಿಶ್ವವಿದ್ಯಾಲಯವು ನಿಗದಿ ಮಾಡಿದ ನಮೂನೆಯಲ್ಲಿ ಪಡೆದುಕೊಂಡು ವರದಿ ತಯಾರಿಸಿ ಸಲ್ಲಿಸುವುದು.

## 7. ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ನಿಗದಿ ಮಾಡಿದ ಶುಲ್ಕದ ವಿವರ (Fees) :

ಡಿಪ್ಲೋಮಾ(ತೋಟಗಾರಿಕೆ)ಗೆಆಯ್ಕೆಯಾದ ಅಭ್ಯರ್ಥಿಯು ಸಂದಾಯ ಮಾಡಬೇಕಾದ ಶುಲ್ಕದ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವಿವರಗಳು | ಪ್ರಥಮ ಷಾಣ್ಮಾಸಿಕ | | | | ದ್ವಿತೀಯ ಷಾಣ್ಮಾಸಿಕ | | | |
|---|---|---|---|---|---|---|---|---|---|
| | | ಸಾಮಾನ್ಯ | ಪ.ಜಾ/ ಪ.ವರ್ಗ | ಪ್ರವರ್ಗ-1** | ಇತರೆ** | ಸಾಮಾನ್ಯ | ಪ.ಜಾ/ ಪ.ವರ್ಗ | ಪ್ರವರ್ಗ-1** | ಇತರೆ ** |
| 1 | ನೋಂದಾವಣೆ ಶುಲ್ಕ | 80 | 80* | 80 | 80 | 80 | 80* | 80 | 80 |
| 2 | ಬೋಧನಾ ಶುಲ್ಕ | 470 | 470* | 470 | 470 | 600 | 600* | 600 | 600 |
| 3 | ಪ್ರಯೋಗಾಲಯ ಶುಲ್ಕ | 140 | 140* | 140 | 140 | 270 | 270* | 270 | 270 |
| 4 | ಪ್ರವೇಶ ಶುಲ್ಕ | 140 | 140* | 140 | 140 | – | – | – | – |
| 5 | ಗ್ರಂಥಾಲಯ ಶುಲ್ಕ | 140 | 140* | 140 | 140 | – | – | – | – |
| 6 | ಕ್ರೀಡಾ ಶುಲ್ಕ | 340 | 340* | 340 | 340 | – | – | – | – |
| 7 | ಶೈಕ್ಷಣಿಕ ಮಾಹಿತಿ ಮತ್ತು ನಿಬಂಧನೆಗಳು | 75 | 75 | 75 | 75 | – | – | – | – |
| 8 | ಮಾಸಪತ್ರಿಕೆ ಶುಲ್ಕ | – | – | – | – | 70 | 70 | 70 | 70 |

| | | | | | | | | | |
|---|---|---|---|---|---|---|---|---|---|
| 9 | ಚಿಕಿತ್ಸಾ ಶುಲ್ಕ | 65 | 65* | 65 | 65 | – | – | – | – |
| 10 | ಸಹಕಾರ/ಸಂಸ್ಥೆ ಶುಲ್ಕ | 65 | 65 | 65 | 65 | – | – | – | – |
| 11 | ಸ್ಟುಡೆಂಟ್ ಏಡ್ ಫಂಡ | 65 | 65 | 65 | 65 | – | – | – | – |
| 12 | ಎಚ್ಚರಿಕೆ ಹಣ (Caution money) | 680 | 680 | 680 | 680 | – | – | – | – |
| 13 | ಪ್ರವಾಸ ಶುಲ್ಕ | 340 | 340* | 340 | 340 | 340 | 340* | 340 | 340 |
| 14 | ಪರೀಕ್ಷಾ ಶುಲ್ಕ | 140 | 140* | 140 | 140 | 270 | 270* | 270 | 270 |
| 15 | ಗುರುತಿನ ಚೀಟಿ ಶುಲ್ಕ | 65 | 65 | 65 | 65 | – | – | – | – |
| 16 | ದಾಖಲಾತಿ ಶುಲ್ಕ | 65 | 65 | 65 | 65 | – | – | – | – |
| 17 | ಎಆರ್ಐಎಸ್ ಶುಲ್ಕ | 70 | 70 | 70 | 70 | 70 | 70 | 70 | 70 |
| 18 | ಭಾರತೀಯ ಯುವ ರೆಡಕ್ರಾಸ್ ಸಂಸ್ಥೆ ಶುಲ್ಕ | 60 | 60 | 60 | 60 | – | – | – | – |
| | **ಒಟ್ಟು (ರೂ.)** | **3000** | **3000** | **3000** | **3000** | **1700** | **1700** | **1700** | **1700** |
| 19 * 20 | ಕ್ರ.ಸಂ. 1+2+3+4+5+6+9+13+14 | – | 1855* | | | | 1560* | | |
| 21 | ಕ್ರ.ಸಂ. 7+10+11+12+15+16+17+18. ಪ.ಜಾ/ಪ.ವರ್ಗದವರು ಪಾವತಿಸತಕ್ಕದ್ದು | – | 1145 | | | – | 140 | – | – |
| 22 | ಗುಂಪು ಆರೋಗ್ಯ ವಿಮೆ | 480 | 480 | 480 | 480 | | – | | |
| 23 | ಎನ್ಎಸ್ಎಸ್ಶುಲ್ಕ | 40 | 40 | 40 | 40 | | | | |
| | **ಒಟ್ಟು ರೂ. (ಪಾವತಿಸತಕ್ಕದ್ದು)** | **3520** | **1665** | **3520** | **3520** | **1700** | **140** | **1700** | **1700** |

## ದ್ವಿತೀಯ ವರ್ಷ

| ಕ್ರ.ಸಂ | ವಿವರಗಳು | ಪ್ರಥಮ ಷಾಣ್ಮಾಸಿಕ | | | | ದ್ವಿತೀಯ ಷಾಣ್ಮಾಸಿಕ | | | |
|---|---|---|---|---|---|---|---|---|---|
| | | ಸಾಮಾನ್ಯ | ಪ.ಜಾ/ ಪ.ವರ್ಗ | ಪ್ರವರ್ಗ–1** | ಇತರೆ** | ಸಾಮಾನ್ಯ | ಪ.ಜಾ/ ಪ.ವರ್ಗ | ಪ್ರವರ್ಗ–1** | ಇತರೆ * * |
| 1 | ನೋಂದಾವಣೆ ಶುಲ್ಕ | 80 | 80* | 80 | 80 | 80 | 80* | 80 | 80 |
| 2 | ಬೋಧನಾ ಶುಲ್ಕ | 410 | 410* | 410 | 410 | 600 | 600* | 600 | 600 |
| 3 | ಪ್ರಯೋಗಾಲಯ ಶುಲ್ಕ | 140 | 140* | 140 | 140 | 270 | 270* | 270 | 270 |
| 4 | ಪ್ರವೇಶ ಶುಲ್ಕ | – | – | – | – | – | – | – | – |
| 5 | ಗ್ರಂಥಾಲಯ ಶುಲ್ಕ | 140 | 140* | 140 | 140 | – | – | – | – |
| 6 | ಕ್ರೀಡಾ ಶುಲ್ಕ | 340 | 340* | 340 | 340 | – | – | – | – |
| 7 | ಶೈಕ್ಷಣಿಕ ಮಾಹಿತಿ ಮತ್ತು ನಿಬಂಧನೆಗಳು | – | – | – | – | – | – | – | – |
| 8 | ಮಾಸಪತ್ರಿಕೆ ಶುಲ್ಕ | – | – | – | – | 70 | 70 | 70 | 70 |
| 9 | ಚಿಕಿತ್ಸಾ ಶುಲ್ಕ | 70 | 70* | 70 | 70 | – | – | – | – |
| 10 | ಸಹಕಾರ/ಸಂಸ್ಥೆ ಶುಲ್ಕ | 65 | 65 | 65 | 65 | – | – | – | – |
| 11 | ಸ್ಟುಡೆಂಟ್ ಏಡ್ ಫಂಡ | 65 | 65 | 65 | 65 | – | – | – | – |
| 12 | ಎಚ್ಚರಿಕೆ ಹಣ (Caution money) | – | – | – | – | – | – | – | – |
| 13 | ಪ್ರವಾಸ ಶುಲ್ಕ | 340 | 340* | 340 | 340 | 340 | 340 | 340 | 340 |
| 14 | ಪರೀಕ್ಷಾ ಶುಲ್ಕ | 140 | 140* | 140 | 140 | 270 | 270 | 270 | 270 |
| 15 | ಗುರುತಿನ ಚೀಟಿ ಶುಲ್ಕ | – | – | – | – | – | – | – | – |
| 16 | ದಾಖಲಾತಿ ಶುಲ್ಕ | – | – | – | – | – | – | – | – |
| 17 | ಎಆರ್ಐಎಸ್ ಶುಲ್ಕ | 70 | 70 | 70 | 70 | 70 | 70 | 70 | 70 |
| 18 | ಭಾರತೀಯ ಯುವ ರೆಡಕ್ರಾಸ್ ಸಂಸ್ಥೆ ಶುಲ್ಕ | 60 | 60 | 60 | 60 | – | – | – | – |
| | **ಒಟ್ಟು (ರೂ.)** | **1920** | **1920** | **1920** | **1920** | **1700** | **1700** | **1700** | **1700** |

| | | | | | | | | | |
|---|---|---|---|---|---|---|---|---|---|
| 19* | ಕ್ರ.ಸಂ. 1+2+3+4+5+6+9+13+14 | | 1660* | | | | 950* | | |
| 20 | ಕ್ರ.ಸಂ. 7+10+11+12+15+16+17+18. ಪ.ಜಾ/.ವರ್ಗದವರು ಪಾವತಿಸತಕ್ಕದ್ದು | | 260 | | | | 750 | | |
| 21 | ಗುಂಪು ಆರೋಗ್ಯ ವಿಮೆ | 480 | 480 | 480 | 480 | | – | | |
| 22 | ಎನ್‌ಎಸ್‌ಎಸ್‌ಶುಲ್ಕ | 40 | 40 | 40 | 40 | – | | – | – |
| 23 | **ಒಟ್ಟು ರೂ. (ಪಾವತಿಸತಕ್ಕದ್ದು)** | **2440** | **780** | **2440** | **2440** | **1700** | **750** | **1700** | **1700** |

**ಸೂಚನೆ:** 1) ಗುಂಪು ಆರೋಗ್ಯ ವಿಮೆ ರೂ. 480.00ನ್ನು ಎಲ್ಲಾ ಅಭ್ಯರ್ಥಿಗಳು ಪ್ರವೇಶದ ಸಮಯದಲ್ಲಿ ಹಣದ ಮುಖಾಂತರ ವಿಶ್ವವಿದ್ಯಾಲಯಕ್ಕೆ ಪಾವತಿಸತಕ್ಕದ್ದು.

2) ಪ್ರತಿ ಷಣ್ಮಾಷಿಕದ ಪ್ರಾರಂಭದಲ್ಲಿ ರಾಜ್ಯ ಪ್ರವಾಸಕ್ಕಾಗಿ ರೂ. 500/–ಗಳನ್ನು ಎಲ್ಲ ವಿದ್ಯಾರ್ಥಿಗಳು ಹಣದ ಮುಖಾಂತರ ವಿಶ್ವವಿದ್ಯಾಲಯಕ್ಕೆ ಪಾವತಿಸಕ್ಕದ್ದು. ರಾಜ್ಯ ಪ್ರವಾಸವನ್ನು 3ನೇ ಸೆಮಿಸ್ಟರ್‌ನ ಮುಕ್ತಾಯದ ನಂತರ ಬಿಡುವಿನಲ್ಲಿ ಕೈಗೊಳ್ಳುವದು.

* ಕ್ರಮ ಸಂಖ್ಯೆ 19 ರಲ್ಲಿನ ಶುಲ್ಕಗಳನ್ನು (ಪ್ರಥಮ ಮತ್ತು ದ್ವಿತೀಯ ವರ್ಷದ) ಸಂಬಂಧಪಟ್ಟ ಡಿಪ್ಲೋಮಾ (ತೋಟಗಾರಿಕೆ) ಸಂಯೋಜಕರು ಆಯಾ ತಾಲೂಕ ಸಮಾಜ ಕಲ್ಯಾಣ ಕಛೇರಿಯಿಂದ ಪಡೆಯತಕ್ಕದೇ ಹೊರತು ಪ್ರವೇಶದ ಸಮಯದಲ್ಲಿ ವಿದ್ಯಾರ್ಥಿಗಳಿಂದ ಪಡೆಯಬಾರದು. ಆದಾಗ್ಯು, ಶೈಕ್ಷಣಿಕ ಮಾಹಿತಿ ಮತ್ತು ನಿಬಂಧನೆಗಳು, ಮಾಸಿಕ ಪತ್ರಿಕೆ, ಸಹಕಾರ/ಸಂಸ್ಥೆ, ಕಾಷನ್ ಮನಿ ಮತ್ತು ಗುರುತಿನ ಚೀಟಿಯ ಶುಲ್ಕಗಳನ್ನು (ಕ್ರ.ಸಂ. 20, ಪ್ರಥಮ ಮತ್ತು ದ್ವಿತೀಯ ವರ್ಷದ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಪಾವತಿಸತಕ್ಕದ್ದು.ಅಂತಿಮ ವರ್ಷದ

ಡಿಪ್ಲೋಮಾ ವಿದ್ಯಾರ್ಥಿಗಳ ಪಿಡಿಸಿ/ಓಜಿಪಿಎ ಮತ್ತು ಡಿಪ್ಲೋಮಾ, ಪ್ರಮಾಣ ಪತ್ರದ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುವುದು.

** ಪ್ರವರ್ಗ–1 ಮತ್ತು ಇತರೆ ವರ್ಗಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳ ಪ್ರವೇಶದ ಸಮಯದಲ್ಲಿ ಪಾವತಿಸಿದ ಶುಲ್ಕದ ವಿನಾಯತಿ ಪಡೆಯಬೇಕೆಂದರೆ ಸರಕಾರದ ಆದೇಶ ಸಂಖ್ಯೆ ಹಿಂ.ವ.ಕ.ಇ.ಶು.ವಿ.ಸಿ.ಆರ್ – 19/2012–13, dtd :22.11.2012 & ಸಂಖ್ಯೆಡಿ.ಬಿ.ಸಿ/ಬೆಂ/ನ/ಶು.ವಿ/ಸಿ.ಆರ್–8/2013–14 ದಿನಾಂಕ: 19.07.2013ಯ ಪ್ರಕಾರ ಅಂತರ್ಜಾಲ (ಆನ್‌ಲೈನ್)ದಲ್ಲಿ ಅರ್ಜಿಯನ್ನು ಮತ್ತು ಸಂಬಂಧಿಸಿದ ದಾಖಲಾತಿಗಳನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಛೇರಿಗೆ ನೀಡಿ ವಿನಾಯತಿ ಪಡೆಯಬಹುದು ಹಾಗೂ ಪ್ರತಿಯನ್ನು ಸಂಬಂಧಿಸಿದ ಡೀನ್/ಸಂಯೋಜಕರಿಗೆ ಸಲ್ಲಿಸಬೇಕು.

**7.1 ಠೇವಣಿ (Deposit) :**

ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಪ್ರವೇಶ ಪಡೆಯುವವರು ಮೇಲ್ಕಂಡಂತೆ ಶುಲ್ಕ ಪಾವತಿಸುವ ಜೊತೆಗೆ ರೂ. 3,000/– ಠೇವಣಿ (ಡಿಪಾಜಿಟ್) ಇಡತಕ್ಕದ್ದು.ಠೇವಣಿ ಹಣವನ್ನು ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಾದ ವಸತಿ ನಿಲಯ, ಗ್ರಂಥಾಲಯ ಇತ್ಯಾದಿಗಳಲ್ಲಿ ಇರುವ ಬಾಕಿಯನ್ನು ತೀರಿಸಿ "ಬೇಬಾಕಿ" (No dues) ಪ್ರಮಾಣ ಪತ್ರ ಸಲ್ಲಿಸಿದವರಿಗೆ ಮಾತ್ರ ಹಿಂತಿರುಗಿಸಲಾಗುವದು. ಕೋರ್ಸ್‌ನ್ನು ಪೂರ್ಣಗೊಳಿಸಿದ ಅಥವಾ ಕೋರ್ಸ್‌ನ್ನು ಬಿಟ್ಟ ಆರು ತಿಂಗಳೊಳಗಾಗಿ ಬೇಬಾಕಿ ಪ್ರಮಾಣ ಪತ್ರ ಸಲ್ಲಿಸಿ ಹಣವನ್ನು ಪಡೆಯುವುದು. ಈ ಅವಧಿಯ ನಂತರ ಬಂದವರನ್ನು ಪರಿಗಣಿಸಲಾಗುವುದಿಲ್ಲ.

## 7.2 ಇತರೆ ಶುಲ್ಕಗಳು (Miscellaneous Fees):

ವಿದ್ಯಾರ್ಥಿಗಳು ಇತರೆ ಪ್ರಮಾಣ ಪತ್ರಗಳನ್ನು ಪಡೆಯಲು ಈ ಕೆಳಗಿನ ಶುಲ್ಕಗಳು ಅನ್ವಯಿಸುವವು.

| ಕ್ರಮ ಸಂಖ್ಯೆ | ವಿವರ | ಶುಲ್ಕ ರೂಪಾಯಿಗಳಲ್ಲಿ |
|---|---|---|
| 1 | ಅರ್ಹತೆ ಪ್ರಮಾಣ ಪತ್ರ | 50/– |
| 2. | ಓ.ಜಿ.ಪಿ.ಎ. ನಕಲು ಪ್ರತಿ | 250/– |
| 3. | ನಕಲು ಶ್ರೇಣಿ ಪತ್ರ (ಗ್ರೇಡ್ ಕಾರ್ಡ್) | 50/– |
| 4. | ವಲಸೆ ಪ್ರಮಾಣ ಪತ್ರ | 200/– |
| 5. | ನಡತೆ ಪ್ರಮಾಣ ಪತ್ರ (ನಕಲು ಪ್ರತಿ) | 50/– |
| 6. | ಇತರೆ ಯಾವುದೇ ಪ್ರಮಾಣ ಪತ್ರ (ನಕಲು ಪ್ರತಿ) | 50/– |
| 7. | ಪೂರಕ ಪರೀಕ್ಷೆ ಶುಲ್ಕ ಪ್ರತಿ ವಿಷಯಕ್ಕೆ | 120/– |
| 8. | ಮರು ಪ್ರವೇಶ ಶುಲ್ಕ | 150/– |
| 9. | ಮರು ನೋಂದಣಿ ಶುಲ್ಕ | 100/– |
| 10 | ದಂಡಸಹಿತ ವಿಳಂಬ ನೋಂದಣಿ ಶುಲ್ಕ (ಪ್ರತಿ ದಿನಕ್ಕೆ) | 10/– |

**ಷರಾ :** ಮೇಲಿನ ಶುಲ್ಕಗಳು ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತವೆ

## 7. 3 ವಲಸೆ ಪ್ರಮಾಣ ಪತ್ರ (Migration Certificate) :

ಡಿಪ್ಲೋಮಾ (ತೋಟಗಾರಿಕೆ)ಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಉನ್ನತ ವ್ಯಾಸಂಗಕ್ಕಾಗಿ ಬೇರೆ ವಿಶ್ವವಿದ್ಯಾಲಯ ಅಥವಾ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ವಿನಂತಿ ಮೇರೆಗೆ ನೇರವಾಗಿ ಅಥವಾ ಅವರು ಪ್ರವೇಶ ಪಡೆದ ವಿಶ್ವವಿದ್ಯಾಲಯ/ಶಿಕ್ಷಣ ಸಂಸ್ಥೆಗಳಿಗೆ ವಲಸೆ ಪ್ರಮಾಣ ಪತ್ರವನ್ನು ನೀಡುವುದು.

## 8. ಮೂಲ ಪಠ್ಯಕ್ರಮ (Basic curriculum) :

ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಸೇರ್ಪಡೆಯಾದ ವಿದ್ಯಾರ್ಥಿಯು ಈ ಕೆಳಗಿನಂತೆ ಒಟ್ಟು ಕೋರ್ಸ್ ಕ್ರೆಡಿಟ್‌ಗಳನ್ನು ನಿಗದಿತ ಅವಧಿಯಲ್ಲಿ ಒಟ್ಟಾರೆ ಸರಾಸರಿ ಗ್ರೇಡ ಪಾಯಿಂಟ್ 5 ಕ್ಕಿಂತಲೂ ಕಡಿಮೆಯಾಗದಂತೆ

(10 ಪಾಯಿಂಟ್ ಸೂಚಿಯ ಗ್ರೇಡ್ ಪದ್ಧತಿ) ಅಭ್ಯಸಿಸಿ ಪೂರ್ಣಗೊಳಿಸಬೇಕಾಗುತ್ತದೆ.

ಡಿಪ್ಲೋಮಾ (ತೋಟಗಾರಿಕೆ) ... 62+2*

ಈ ಕೋರ್ಸ್ ಕ್ರೆಡಿಟ್‌ಗಳನ್ನು ಆಯಾ ವಿಷಯಕ್ಕೆ ಸಂಬಂಧಿಸಿದ ಮೂಲ ಪಠ್ಯಕ್ರಮಗಳ ಜೊತೆಗೆ ಪ್ರಾಯೋಗಿಕ ಕಾರ್ಯಗಳು, ಕ್ಷೇತ್ರದ ವೀಕ್ಷಣೆ, ಕ್ಷೇತ್ರ ಹಾಗೂ ಪ್ರಯೋಗಾಲಯದ ಕಾರ್ಯಗಳನ್ನು ಒಳಗೊಂಡಿರುತ್ತದೆ.

## 8.1 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ನ ಸೆಮಿಸ್ಟರ್‌ವಾರು ವಿಷಯಗಳು :

| ಪಠ್ಯಕ್ರಮ ಸಂಖ್ಯೆ<br>Course Number | ಪಠ್ಯಕ್ರಮ ಶೀರ್ಷಿಕೆ<br>Course title | ಕ್ರೆಡಿಟ್ ತಾಸುಗಳು<br>Credit Hours |
|---|---|---|
| | I ನೇಯ ಸೆಮಿಸ್ಟರ್ | |
| ಡಿಸಿಎಚ್-೧೦೧<br>DCH - 101 | ಕೃಷಿ ಸಸ್ಯಶಾಸ್ತ್ರ<br>Agricultural Botany | 1+1 |
| ಡಿಸಿಎಚ್-೧೦೨<br>DCH - 102 | ಆಂಗ್ಲ ಭಾಷೆ<br>English | 1+1 |
| ಡಿಸಿಎಚ್-೧೦೩<br>DCH - 103 | ತೋಟಗಾರಿಕೆಯ ಮೂಲ ತತ್ವಗಳು<br>Fundamentals of Horticulture | 2+1 |
| ಡಿಸಿಎಚ್-೧೦೪<br>DCH - 104 | ಬೇಸಾಯಶಾಸ್ತ್ರ<br>Agronomy | 1+1 |
| ಡಿಸಿಎಚ್-೧೦೫<br>DCH - 105 | ಮಣ್ಣುವಿಜ್ಞಾನ<br>Soil Science | 1+1 |
| ಡಿಸಿಎಚ್-೧೦೬<br>DCH - 106 | ತೋಟಗಾರಿಕಾ ಕೀಟಶಾಸ್ತ್ರ -I<br>Horticultural Entomology -I | 1+1 |
| ಡಿಸಿಎಚ್-೧೦೭<br>DCH - 107 | ಕೃಷಿ ಅರ್ಥಶಾಸ್ತ್ರ ಮತ್ತು ಮಾರುಕಟ್ಟೆ<br>Agricultural Economics and arketing | 2+1 |
| ಎನ್ ಎಸ್ ಎಸ್ -<br>೨೦೧<br>NSS-201 | ರಾಷ್ಟ್ರೀಯ ಸೇವಾ ಯೋಜನೆ– I<br>National Service Scheme -I | 0+1* |
| | ಒಟ್ಟು ಕ್ರೆಡಿಟ್ ತಾಸುಗಳು | **16+1*** |

| ಪಠ್ಯಕ್ರಮ ಸಂಖ್ಯೆ<br>Course Number | ಪಠ್ಯಕ್ರಮ ಶೀರ್ಷಿಕೆ<br>**Course title** | ಕ್ರೆಡಿಟ್ ತಾಸುಗಳು<br>Credit Hours |
|---|---|---|
| | **II ನೇಯ ಸೆಮಿಸ್ಟರ್** | |
| ಡಿಸಿಎಚ್-೧೦೮<br>DCH - 108 | ಮಣ್ಣಿನ ರಸಾಯನ ವಿಜ್ಞಾನ ಮತ್ತು ಫಲವತ್ತತೆ<br>Soil chemistry and fertility | 1+1 |
| ಡಿಸಿಎಚ್-೧೦೯<br>DCH - 109 | ಸಾವಯವ ಕೃಷಿ<br>Organic farming | 1+2 |
| ಡಿಸಿಎಚ್-೧೧೦<br>DCH - 110 | ವಾಣಿಜ್ಯ ಹಣ್ಣಿನ ಬೆಳೆಗಳು<br>Commercial fruit crops | 1+1 |
| ಡಿಸಿಎಚ್-೧೧೧<br>DCH - 111 | ಇತರೆ ಹಣ್ಣಿನ ಬೆಳೆಗಳು<br>Other fruit crops | 1+1 |
| ಡಿಸಿಎಚ್-೧೧೨<br>DCH - 112 | ತರಕಾರಿ ಬೆಳೆಗಳು -I<br>Vegetable Crops -I | 1+1 |
| ಡಿಸಿಎಚ್-೧೧೩<br>DCH - 113 | ವಾಣಿಜ್ಯ ಪುಷ್ಪ ಬೇಸಾಯ<br>Commercial Floriculture | 1+1 |
| ಡಿಸಿಎಚ್-೧೧೪<br>DCH - 114 | ಸಸ್ಯಗಳಲ್ಲಿ ವಂಶಾಭಿವೃದ್ಧಿ – I<br>Genetic improvement in plants- I | 1+1 |
| ಎನ್ ಎಸ್ ಎಸ್–೨೦೨<br>NSS-202 | ರಾಷ್ಟ್ರೀಯ ಸೇವಾ ಯೋಜನೆ– II<br>National Service Scheme -II | 0+1* |
| | ಒಟ್ಟು ಕ್ರೆಡಿಟ್ ತಾಸುಗಳು | **15+1*** |

| ಪಠ್ಯಕ್ರಮ ಸಂಖ್ಯೆ<br>Course Number | ಪಠ್ಯಕ್ರಮ ಶೀರ್ಷಿಕೆ<br>Course title | ಕ್ರೆಡಿಟ್ ತಾಸುಗಳು<br>Credit Hours |
|---|---|---|
| | **III ನೇಯ ಸೆಮಿಸ್ಟರ್** | |
| ಡಿಸಿಎಚ್-೧೧೫<br>DCH - 115 | ಕೃಷಿ ಅರಣ್ಯಶಾಸ್ತ್ರ<br>Agro Forestry | 1+1 |
| ಡಿಸಿಎಚ್-೧೧೬<br>DCH - 116 | ಸಸ್ಯಾಭಿವೃದ್ಧಿ ಮತ್ತು ಸಸ್ಯಪಾಲನೆ –II<br>Plant Propagation and Nursery Mangement-II | 0+1 |
| ಡಿಸಿಎಚ್-೧೧೭<br>DCH - 117 | ತರಕಾರಿ ಬೆಳೆಗಳು-II<br>Vegetable crops-II | 1+1 |
| ಡಿಸಿಎಚ್-೧೧೮<br>DCH - 118 | ತೋಟಪಟ್ಟಿ ಮತ್ತು ಸಾಂಬಾರು ಬೆಳೆಗಳು<br>Plantation and Spice crops | 2+1 |

| | | |
|---|---|---|
| ಡಿಸಿಎಚ್-೧೧೯<br>DCH - 119 | ಕೊಯ್ಲೋತ್ತರ ತಂತ್ರಜ್ಞಾನ – I<br>Post harvest Technology-I | 1+1 |
| ಡಿಸಿಎಚ್-೧೨೦<br>DCH - 120 | ತೋಟಗಾರಿಕಾ ಸಸ್ಯಗಳ ರೋಗಶಾಸ್ತ್ರ-I<br>Horticultural Plant pathology -I | 1+1 |
| ಡಿಸಿಎಚ್-೧೨೧<br>DCH - 121 | ಔಷಧೀಯ ಮತ್ತು ಸುಗಂಧಿ ಸಸ್ಯಗಳು<br>Medicinal and Aromatic plants | 1+1 |
| ಡಿಸಿಎಚ್-೧೨೨<br>DCH - 122 | ತೋಟಗಾರಿಕಾ ಕೀಟಶಾಸ್ತ್ರ-II<br>Horticultural Entomology -II | 1+1 |
| | ಒಟ್ಟು ಕ್ರೆಡಿಟ್ ತಾಸುಗಳು | **16** |

| ಪಠ್ಯಕ್ರಮ ಸಂಖ್ಯೆ<br>**Course Number** | ಪಠ್ಯಕ್ರಮ ಶೀರ್ಷಿಕೆ<br>**Course title** | ಕ್ರೆಡಿಟ್ ತಾಸುಗಳು<br>**Credit Hours** |
|---|---|---|
| | **IV ನೇಯ ಸೆಮಿಸ್ಟರ್** | |
| ಡಿಸಿಎಚ್-೧೨೩<br>DCH - 123 | ಪ್ರಕೃತಿ ದೃಶ್ಯ ಉದ್ಯಾನ ಶಾಸ್ತ್ರ<br>Landscape Gardening | 0+1 |
| ಡಿಸಿಎಚ್-೧೨೪<br>DCH - 124 | ಕೊಯ್ಲೋತ್ತರ ತಂತ್ರಜ್ಞಾನ- II<br>Post harvest Technology -II | 0+2 |
| ಡಿಸಿಎಚ್-೧೨೫<br>DCH - 125 | ತೋಟಗಾರಿಕಾ ಸಸ್ಯಗಳ ರೋಗಶಾಸ್ತ್ರ-II<br>Horticultural Plant pathology -II | 1+1 |
| ಡಿಸಿಎಚ್-೧೨೬<br>DCH - 126 | ಸಂರಕ್ಷಿತ ಬೇಸಾಯ<br>Protected cultivation | 1+2 |
| ಡಿಸಿಎಚ್-೧೨೭<br>DCH - 127 | ಅಂಗಾಂಶ ಕೃಷಿ<br>Tissue culture | 0+2 |
| ಡಿಸಿಎಚ್-೧೨೮<br>DCH - 128 | ಬೀಜೋತ್ಪಾದನೆ<br>Seed production | 1+1 |
| ಡಿಸಿಎಚ್-೧೨೯<br>DCH - 129 | ಕೃಷಿ ತಾಂತ್ರಿಕತೆ<br>Agriculture Engineering | 2+1 |
| | ಒಟ್ಟು ಕ್ರೆಡಿಟ್ ತಾಸುಗಳು | **15** |
| | ಒಟ್ಟಾರೆ ಕ್ರೆಡಿಟ್ ತಾಸುಗಳು | **62+2*** |

* ಕಡ್ಡಾಯ ಕ್ರೆಡಿಟ್, ಆದರೆ ಒಟ್ಟಾರೆ ಸರಾಸರಿ ಶ್ರೇಯಾಂಕ ಅಂಶಗಳನ್ನು ಲೆಕ್ಕಿಸಲು ಪರಿಗಣಿಸುವಂತಿಲ್ಲ.

**8.2 ರಾಷ್ಟ್ರೀಯ ಸೇವಾ ಯೋಜನೆ (National Service Scheme) :**

ಡಿಪ್ಲೋಮಾ (ತೋಟಗಾರಿಕೆ)ಗೆ 2015–16ನೇಯ ಶೈಕ್ಷಣಿಕ ಹಾಗೂ ನಂತರದ ಸಾಲಿನಿಂದ ದಾಖಲಾಗುವ ಪ್ರಥಮ ವರ್ಷದ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಮೊದಲ ಮತ್ತು ಎರಡನೇಯ ಷಣ್ಮಾಸಿಕದಲ್ಲಿ ಈ ಕೋರ್ಸ್ ಕ್ರೆಡಿಟ್‌ಗಳ ನೋಂದಣಿ ಕಡ್ಡಾಯವಾಗಿದೆ. ಈ ಕ್ರೆಡಿಟ್ಸ್‌ಗಳನ್ನು ಸಮಾಧಾನಕರ (S) ಶ್ರೇಯಾಂಕದಿಂದ ಸೂಚಿಸುವುದು. ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರವನ್ನು ಷಣ್ಮಾಸಿಕ ಬಿಡುವಿನ ವೇಳೆಯಲ್ಲಿ ಕೈಗೊಳ್ಳಬಹುದು.

**9. ಪ್ರತಿ ಸೆಮಿಸ್ಟರದಲ್ಲಿ ಗರಿಷ್ಠ ನೋಂದಣಿ ಮಾಡಬಹುದಾದ ಕೋರ್ಸ್ ಕ್ರೆಡಿಟ್‌ಗಳು**

9.1 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಸಾಮಾನ್ಯವಾಗಿ ಪ್ರತಿ ಷಣ್ಮಾಸಿಕದಲ್ಲಿ ವಿದ್ಯಾರ್ಥಿಯು 18 ಕ್ಕಿಂತ ಹೆಚ್ಚು ಕೋರ್ಸ್ ಕ್ರೆಡಿಟ್ಸ್‌ಗಳನ್ನು ನೊಂದಾಯಿಸುವಂತಿಲ್ಲ.

**ಟಿಪ್ಪಣಿ :** ಪ್ರಥಮ ವರ್ಷದ ಮೊದಲ ಮತ್ತು ಎರಡನೇಯ ಷಾಣ್ಮಾಸಿಕದಲ್ಲಿ ಗರಿಷ್ಠ 18 ಕೋರ್ಸ್ ಕ್ರೆಡಿಟ್‌ಗಳನ್ನು ನೊಂದಾಯಿಸಿದರೂ ಸಹ ಎನ್‌ಎಸ್‌ಎಸ್ ಕೋರ್ಸ್ ಕ್ರೆಡಿಟ್‌ನ್ನು ನೋಂದಣಿ ಮಾಡಬಹುದು. ಈ ಕ್ರೆಡಿಟ್ಸ್‌ಗಳನ್ನು ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು ಹಾಗೂ ಸರಾಸರಿ ಶ್ರೇಯಾಂಕ ಅಂಶಗಳನ್ನು ಲೆಕ್ಕಿಸಲು ಗಣನೆಗೆ ತೆಗೆದುಕೊಳ್ಳುವುದಿಲ್ಲ.

9.2 ಷಣ್ಮಾಸಿಕ ಪ್ರಾರಂಭವಾದ ಆರು ವಾರಗಳ ನಂತರ ನೋಂದಾಯಿಸಿದ ಯಾವುದೇ ವಿಷಯುವನ್ನು ಅಥವಾ ಪೂರ್ತಿ ಷಣ್ಮಾಸಿಕವನ್ನು ಮೊಟಕುಗೊಳಿಸುವಂತಿಲ್ಲ ಅಥವಾ ಮಧ್ಯದಲ್ಲೇ ಬಿಡುವಂತಿಲ್ಲ ಹಾಗಾದಲ್ಲಿ ಅಭ್ಯರ್ಥಿಯ ನೋಂದಣಿಯ ಹಾಗೂ ಆಯ್ಕೆಯು ರದ್ದಾಗುವುದು.

9.3 ಅಭ್ಯರ್ಥಿಯು ಪ್ರತಿ ಷಣ್ಮಾಸಿಕದ ಕೊನೆಯಲ್ಲಿ ನಿಗದಿಪಡಿಸಿದ ಸರಾಸರಿ ಕೋರ್ಸ್ ಗ್ರೇಡ್ ಪಾಯಿಂಟ್ (ಸಿಜಿಪಿಎ) 5.0/10.0 ಉಳಿಸಿಕೊಳ್ಳದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿ, ಈ ವಿಷಯವನ್ನು ಸಂಬಂಧಿಸಿದ ಸಂಯೋಜಕರು ವಿದ್ಯಾರ್ಥಿಯ ಪಾಲಕರ ಗಮನಕ್ಕೆ ತರಬೇಕು.

## 10. ಹಾಜರಾತಿ (Attendance) :

10.1 ಆಯಾ ಕೋರ್ಸಿನ ಎಲ್ಲ ಪಾಠ–ಪ್ರಾಯೋಗಿಕಗಳಿಗೆ ಕಡ್ಡಾಯವಾಗಿ ಶೇಕಡಾ.80 ರಷ್ಟು ಹಾಜರಾತಿಯನ್ನು ನಿಗದಿಪಡಿಸಿದೆ. ಮೊದಲನೇ ಷಣ್ಮಾಸಿಕದಲ್ಲಿ ಕೋರ್ಸ್ ಹೆಸರು ನೋಂದಾಯಿಸಿದ ಅಥವಾ ಷಣ್ಮಾಸಿಕ ಪ್ರಾರಂಭದ ದಿನಾಂಕ, ಇವುಗಳಲ್ಲಿ ಯಾವುದು ನಂತರ ಬರುವುದೋ ಆ ದಿನಾಂಕದಿಂದ ಹಾಜರಾತಿಯನ್ನು ಪರಿಗಣಿಸಲಾಗುವುದು. ಪರೀಕ್ಷೆ ಸಮಯದಲ್ಲಿ ಅನುಚಿತ ಕ್ರಮಗಳಿಂದಾಗಿ ಅಥವಾ ಅನುಚಿತ ವರ್ತನೆಯಿಂದಾಗಿ, ಪರೀಕ್ಷಾ ಕೊಠಡಿಯಿಂದ ಹೊರ ಹಾಕಿದರೂ ಹಾಜರಾತಿಯನ್ನು ಪರಿಗಣಿಸಲಾಗುವುದು, ಯಾವುದೇ ಪರೀಕ್ಷೆಗೆ ಗೈರು ಹಾಜರಾಗಿ, ಮುಂದಿನ ದಿನಗಳಲ್ಲಿ ಮತ್ತೆ ಅದೇ ಪರೀಕ್ಷೆಗೆ ಹಾಜರಾದರೆ ಅದಕ್ಕೆ ಹಾಜರಾತಿ ದೊರೆಯುವುದಿಲ್ಲ. ಆಯಾ ಕೋರ್ಸ್‌ಗೆ ನಿಗದಿ ಪಡಿಸಿದ ಹಾಜರಾತಿಯು ಶೇಕಡಾ.80 ರಷ್ಟು ವರ್ಗಗಳಿಗೆ ಹಾಜರಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಗೆ ಆ ಕೋರ್ಸ್‌ನ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡುವುದಿಲ್ಲ ಹಾಗೂ ಅಂತಹ ವಿದ್ಯಾರ್ಥಿಗೆ "ಎಸ್‌ಎ"(SA) ಚಿನ್ಹೆ ನೀಡಲಾಗುವದು. ಸಂಬಂಧಪಟ್ಟ ಡೀನ್‌ರವರು ಸೂಕ್ತ ಕಾರಣಗಳೊಂದಿಗೆ ವಿದ್ಯಾರ್ಥಿಯ ಕಡಿಮೆಯಾದ ಹಾಜರಾತಿಯನ್ನ ಗರಿಷ್ಟ ಶೇ.5 ರಷ್ಟನ್ನು ಮನ್ನಿಸಬಹುದಾಗಿದೆ.ಅದಾಗ್ಯೂ ಕಡಿಮೆ ಹಾಜರಾತಿ ಇದ್ದರೆ, ಆ ಕೋರ್ಸ್‌ಗೆ ವಿದ್ಯಾರ್ಥಿಯು ಕಡ್ಡಾಯವಾಗಿ ಮತ್ತೊಮ್ಮೆ ನೋಂದಾಯಿಸಬೇಕಾಗುವುದು.

10.2 ವಿದ್ಯಾರ್ಥಿಯು ಸಂಬಂಧಪಟ್ಟ ಅಧಿಕಾರಿಗಳ ಪೂರ್ವಾನುಮತಿ ಪಡೆದು ವಿಶ್ವವಿದ್ಯಾಲಯದ ಕಾರ್ಯನಿಮಿತ್ಯ ವರ್ಗಗಳಿಗೆ ಗೈರು ಹಾಜರಾದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಹಾಜರಾತಿ ನೀಡಲಾಗುವುದು.ಆ ಅವಧಿಯಲ್ಲಿ ತಪ್ಪಿಹೋದ ಎಲ್ಲ ರೀತಿಯ ಪರೀಕ್ಷೆ/ಪ್ರಾಯೋಗಿಕಗಳನ್ನು (ವಾರ್ಷಿಕ ಪರೀಕ್ಷೆ ಅಥವಾ ಅಂತಿಮ ಪರೀಕ್ಷೆ, ಹೊರತುಪಡಿಸಿ) ತೆಗೆದುಕೊಳ್ಳಲು ವಿದ್ಯಾರ್ಥಿಗೆ ಸಂಬಂಧಿಸಿದ ಡೀನ್‌ರವರು ಅನುಮತಿ ನೀಡಬಹುದು.

10.3 ಸಂಬಂಧಿಸಿದ ಕೋರ್ಸಿನ ಶಿಕ್ಷಕರು ಅಥವಾ ಅವರ ಅನುಪಸ್ಥಿತಿಯಲ್ಲಿ ಆಯಾ ವಿಭಾಗದ ಮುಖ್ಯಸ್ಥರ ಅನುಮತಿ ಮೇರೆಗೆ ಅನಿವಾರ್ಯ ಕಾರಣಗಳಿಂದಾಗಿ ವಿದ್ಯಾರ್ಥಿಯು ಪರೀಕ್ಷೆಗೆ ಹಾಜರಾಗದಿದ್ದಲ್ಲಿ (ವಾರ್ಷಿಕ/ಅಂತಿಮ ಪರೀಕ್ಷೆಯನ್ನು ಹೊರತುಪಡಿಸಿ) ಅಂತಹ ವಿದ್ಯಾರ್ಥಿಗಳಿಗೆ

ಮರುಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಬಹುದಾಗಿದೆ. ವಿದ್ಯಾರ್ಥಿಯು ವೈದ್ಯಕೀಯ ಆಧಾರದ ಮೇಲೆ ಗೈರು ಹಾಜರಾದಾಗ ಸಂಬಂಧಪಟ್ಟ ವೈದ್ಯರಿಂದ ಪ್ರಮಾಣ ಪತ್ರ ಒದಗಿಸಬೇಕು. ವಸತಿ ನಿಲಯದಲ್ಲಿ ವಾಸವಿರುವ ವಿದ್ಯಾರ್ಥಿಯು ತೋವಿವಿದ ವೈದ್ಯಾಧಿಕಾರಿಯಿಂದ ಮಾತ್ರ ವೈದ್ಯಕೀಯ ಪ್ರಮಾಣ ಪತ್ರ ಪಡೆಯಬೇಕು.ಆಯಾ ವಿಭಾಗದ ಮುಖ್ಯಸ್ಥರು (ವಾರ್ಷಿಕ/ಅಂತಿಮ ಪರೀಕ್ಷೆಯನ್ನು ಹೊರತುಪಡಿಸಿ), ಉಳಿದ ಯಾವದೇ ಪರೀಕ್ಷೆಗಳನ್ನು ಆಯಾ ಕೋರ್ಸ್ ಶಿಕ್ಷಕರ ಶಿಫಾರಸ್ಸಿನ ಮೇರೆಗೆ ವಿದ್ಯಾರ್ಥಿಗೆ ಮರು ಅಥವಾ ತಪ್ಪಿಸಲಾದ ಪರೀಕ್ಷೆಗೆ ಅನುಮತಿ ಕೊಡಬಹುದಾಗಿದೆ. ಹೀಗೆ ತಪ್ಪಿಸಿದ ಪರೀಕ್ಷೆಗಳನ್ನು ಮೂಲತಃ ನಿಗದಿಮಾಡಿದ ಪರೀಕ್ಷೆಯ ದಿನಾಂಕದ 15 ದಿನಗಳೊಳಗಾಗಿ ನಡೆಸತಕ್ಕದ್ದು.ಅಭ್ಯರ್ಥಿಯು ಯಾವುದೇ ಕೋರ್ಸ್‌ನಲ್ಲಿ ಒಂದಕ್ಕಿಂತ ಹೆಚ್ಚು ತಪ್ಪಿಸಿದ ಪರೀಕ್ಷೆಯನ್ನು ತೆಗೆದುಕೊಳ್ಳುವಂತಿಲ್ಲ.

10.4 ಒಂದು ವೇಳೆ ಸಂಬಂಧಿಸಿದ ಕೋರ್ಸ್ ಶಿಕ್ಷಕರಿಂದ ಹಾಗೂ ವಿಭಾಗದ ಮುಖ್ಯಸ್ಥರಿಂದ ವರ್ಗ/ಪರೀಕ್ಷೆಗಳಿಗೆ ಗೈರು ಹಾಜರಾಗಲು ಅನುಮತಿ ದೊರೆಯದಿದ್ದಲ್ಲಿ, ವಿದ್ಯಾರ್ಥಿಯು ಸಂಬಂಧಿಸಿದ ಡೀನ್‌ರಲ್ಲಿ ಅನುಮತಿಗಾಗಿ ಮರು ಪರಿಶೀಲನೆಗೆ ಮನವಿ ಸಲ್ಲಿಸಬಹುದು. ಇಂತಹ ಸಂದರ್ಭಗಳಲ್ಲಿ ಡೀನ್‌ರವರ ನಿರ್ಧಾರವೇ ಅಂತಿಮವಾಗಿರುವುದು.

## 11. ವಿದ್ಯಾರ್ಥಿಗಳ ಮೌಲ್ಯಮಾಪನ (Evaluation of students) :

11.1 ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ನಲ್ಲಿ ಈ ಕೆಳಗಿನಂತೆ ಕೈಗೊಳ್ಳಲಾಗುವುದು.

11.2 ಪ್ರತಿ ವಿಷಯದಲ್ಲಿನ ಅಭ್ಯರ್ಥಿಯ ಮೌಲ್ಯಮಾಪನವನ್ನು "ಶ್ರೇಯಾಂಕ (ಗ್ರೇಡ್)" ಎಂದು ಕರೆಯುಲಾಗುತ್ತಿದ್ದು, ವಿದ್ಯಾರ್ಥಿಯ ಆಯಾ ಕೋರ್ಸ್‌ನಲ್ಲಿನ ಪ್ರಾವಿಣ್ಯತೆ/ಸಾಧನೆಯ ಮೇರೆಗೆ ಈ ಮೊದಲು ವಿವರಿಸಿದಂತೆ 'ಶ್ರೇಯಾಂಕ ಅಂಕ' (ಗ್ರೇಡ್ ಪಾಯಿಂಟ್ಸ್) ನೀಡಲಾಗುವುದು.

11.3 ವಿದ್ಯಾರ್ಥಿಯು ಪಡೆದ ಸಂಚಿತ ಸರಾಸರಿ ಶ್ರೇಯಾಂಕ ಅಂಶ (ಗ್ರೇಡ್ ಪಾಯಿಂಟ್ಸ್)(CGPA)ಹಾಗೂ ಒಟ್ಟಾರೆ ಸರಾಸರಿ ಶ್ರೇಯಾಂಕ ಅಂಶ (ಗ್ರೇಡ್ ಪಾಯಿಂಟ್ಸ್) (OGPA)ಆಧಾರದ ಮೇಲೆ ಡಿಪ್ಲೋಮಾ ಕೋರ್ಸ್ ಪ್ರಮಾಣ ಪತ್ರ ಪಡೆಯಲು ಅರ್ಹತೆಯನ್ನು ನಿರ್ಧರಿಸಲಾಗುವುದು.

**11.5 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ನೋಂದಾಯಿತ ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಈ ಕೆಳಗಿನ ಅಂಶಗಳನ್ನು ಪರಿಗಣಿಸುವುದು :**

11.5.1 ಒಟ್ಟಾರೆ ಕನಿಷ್ಠ ಶೇಕಡಾ 80 ಕ್ಕಿಂತ ಹೆಚ್ಚು ಹಾಜರಾತಿ ಹೊಂದಿದ ವಿದ್ಯಾರ್ಥಿಗೆ ಹಾಜರಾತಿಗೆ ನಿಗದಿಪಡಿಸಿದ 5 ಅಂಕಗಳನ್ನು ವಿದ್ಯಾರ್ಥಿಗಳ ಹಾಜರಾತಿ ಅನುಸಾರ ಸರಿಯಾದ ಪ್ರಮಾಣದಲ್ಲಿ ನೀಡುವುದು.

11.5.2 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ನೊಂದಾಯಿತ ವಿದ್ಯಾರ್ಥಿಗಳು ಒಂದು ಷಾಣ್ಮಾಸಿಕದಲ್ಲಿ ಪ್ರತಿಯೊಂದು ಉಪನ್ಯಾಸ ಮತ್ತು ಪ್ರಾಯೋಗಿಕಗಳನ್ನು ಒಳಗೊಂಡ ಕೋರ್ಸ್(ವಿಷಯ)ಗೆ [ಸಂಬಂದಪಟ್ಟಂತೆ $1^1/_2$ ಘಂಟೆಯ (90 ನಿಮಿಷ) ಅವಧಿಯು]ಒಟ್ಟು ಮೂರು ಪರೀಕ್ಷೆಗಳನ್ನು ಬರೆಯಬೇಕಿದ್ದು,ಪರೀಕ್ಷಾ ಅಂಕಗಳ ಹಾಗೂ ಪರೀಕ್ಷಾ ಸಮಯದ ವಿಂಗಡನೆಯನ್ನು ಈ ಕೆಳಗಿನಂತೆ ಮಾಡುವುದು.

| ಕ್ರ. ಸಂ. | ವಿವರ | ಅಂಕಗಳು | ಪರೀಕ್ಷೆ ಸಮಯ |
|---|---|---|---|
| 1 | ಹಾಜರಾತಿ | 05 | – |
| 2 | ಮಧ್ಯಂತರ ಲಿಖಿತ ಪರೀಕ್ಷೆ | 30 | 8/9 ನೇ ವಾರ |
| 3 | ಪ್ರಾಯೋಗಿಕ ಪರೀಕ್ಷೆ | 20 | 19/20 ನೇ ವಾರ |
| 4 | ಅಂತಿಮ ಪರೀಕ್ಷೆ | 30 | 20/21 ನೇ ವಾರ |
| 5 | ಪ್ರಾಯೋಗಿಕ ಕೈಪಿಡಿ/ಮೌಖಿಕ ಪರೀಕ್ಷೆ/ವಿಷಯ ಮಂಡನೆ/ಅಸೈನ್‌ಮೆಂಟ್ | 15 | – |
| | **ಒಟ್ಟು** | **100** | – |

11.5.3 ಆದರೆ, ಕೇವಲ ಪ್ರಾಯೋಗಿಕ ಕೋರ್ಸ್(ವಿಷಯ)ಗಳ ಮೌಲ್ಯಮಾಪನವನ್ನು ಕೆಳಗಿನಂತೆ ಮಾಡುವುದು

| ಕ್ರ. ಸಂ. | ವಿವರ | ಅಂಕಗಳು | ಪರೀಕ್ಷೆ ಸಮಯ |
|---|---|---|---|
| 1 | ಹಾಜರಾತಿ | 05 | – |
| 2 | ಪ್ರಾಯೋಗಿಕ ಕೆಲಸದ ಅನುಭವ | 30 | ನಿರಂತರ |
| 3 | ಪ್ರಾಯೋಗಿಕ ಅಂತಿಮ ಪರೀಕ್ಷೆ | 50 | 20/21 ನೇ ವಾರ |
| 4 | ಪ್ರಾಯೋಗಿಕಕೈಪಿಡಿ/ಮೌಖಿಕ ಪರೀಕ್ಷೆ/ವಿಷಯ ಮಂಡನೆ/ಅಸೈನ್‌ಮೆಂಟ್ | 15 | – |
| | **ಒಟ್ಟು** | **100** | – |

11.5.4 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ನೊಂದಾಯಿತ ವಿದ್ಯಾರ್ಥಿಗಳು ಅಂತಿಮ ಲಿಖಿತ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

11.5.5 ಶಿಕ್ಷಕರು ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಜಾಣ್ಮೆ, ಕ್ಷೇತ್ರಕಾರ್ಯ/ಪ್ರಾಯೋಗಿಕಗಳಲ್ಲಿ ವಿದ್ಯಾರ್ಥಿಯ ಪಾಲ್ಗೊಳ್ಳುವಿಕೆ ಹಾಗೂ ಸಾಧನೆ ಮೇರೆಗೆ ಗ್ರೇಡ್ ಪಾಯಿಂಟ್ ಮೌಲ್ಯಮಾಪನ ಮಾಡಬೇಕು.

11.5.6 **ಅಂತಿಮ ಲಿಖಿತ ಪರೀಕ್ಷೆ (Final Theory Examination) :**

ಡಿಪ್ಲೋಮಾ(ತೋಟಗಾರಿಕೆ) ಕೋರ್ಸಿಗೆ ನೊಂದಾಯಿತ ವಿದ್ಯಾರ್ಥಿಗಳ ಅಂತಿಮ ಲಿಖಿತ ಪರೀಕ್ಷೆಯು $1^1/_2$ ಘಂಟೆ (90 ನಿಮಿಷ) ಅವಧಿಯದಾಗಿದ್ದು, 30 ಅಂಕಗಳನ್ನು ಹೊಂದಿರುವುದು ಹಾಗೂ ತರಗತಿಗಳು ಪ್ರಾರಂಭವಾದಾಗಿನಿಂದ ಷಾಣ್ಮಾಸಿಕದ ಕೊನೆಯವರೆಗೆ ಪಾಠಮಾಡಿದ ಎಲ್ಲ ವಿಷಯಗಳನ್ನು ಒಳಗೊಂಡಿರುತ್ತದೆ.

**12. ಶ್ರೇಯಾಂಕಗಳ ಅಧಿಸೂಚನೆ (Notification of Grades) :**

12.1 ಡಿಪ್ಲೋಮಾ(ತೋಟಗಾರಿಕೆ) ಕೋರ್ಸ್‌ಗಳ ಆಯಾ ವಿಷಯಗಳಲ್ಲಿ ವಿದ್ಯಾರ್ಥಿಗಳು ಪಡೆದ ಮಧ್ಯಂತರ ಪರೀಕ್ಷೆ, ಅಂತಿಮ ಲಿಖಿತ ಪರೀಕ್ಷೆಯ ಅಂಕಗಳು, ಪ್ರಾಯೋಗಿಕ ಪರೀಕ್ಷೆಯ ಅಂಕಗಳು, ಇತ್ಯಾದಿಗಳನ್ನು ಕೂಡಿಸಿ ಒಟ್ಟಾರೆ ಅಂಕ ಹಾಗೂ ಶ್ರೇಯಾಂಕ ಅಂಶ (ಗ್ರೇಡ್ ಪಾಯಿಂಟ್)ಗಳನ್ನು ಶಿಕ್ಷಕರು ಅಖೈರುಗೊಳಿಸಿ ಆಯಾ ವಿಭಾಗದ ಸೂಚನಾ ಫಲಕದಲ್ಲಿ ಅಧಿಸೂಚನೆ ಮೂಲಕ ವಿದ್ಯಾರ್ಥಿಗಳ ಮಾಹಿತಿಗಾಗಿ ಪ್ರಕಟಿಸಬೇಕು. ತಪ್ಪುಗಳೇನೆ ಇದ್ದರೂ, ತಿದ್ದುಪಡಿಗೆ ಒಂದು ವಾರ ಕಾಲಾವಕಾಶವನ್ನು ವಿದ್ಯಾರ್ಥಿಗಳಿಗೆ ಕೊಡಬೇಕು.

12.2 ಆಯಾ ವಿಷಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಅಂತಿಮ ಶ್ರೇಯಾಂಕ (ಗ್ರೇಡ್) ವರದಿಯನ್ನು ಶಿಕ್ಷಕರು ತಮ್ಮ ವಿಭಾಗದ ಮುಖ್ಯಸ್ಥರ ಮುಖಾಂತರ ಸಂಬಂಧಪಟ್ಟ ಡೀನರವರಿಗೆ ಕಳುಹಿಸಿಕೊಡಬೇಕು.

12.3 ಪ್ರತಿ ಷಾಣ್ಮಾಸಿಕ ಅಂತ್ಯದಲ್ಲಿ ಆಯಾ ವಿಷಯದ ಶಿಕ್ಷಕರು ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗಕ್ಕೆ ದಾಖಲಾತಿಗಾಗಿ ಕಳುಹಿಸಿದ ವಿದ್ಯಾರ್ಥಿಗಳ ಶ್ರೇಯಾಂಕ ಅಂಶ (ಗ್ರೇಡ್ ಪಾಯಿಂಟ್)ಗಳ ವರದಿಯೇ ಅಂತಿಮವಾದದ್ದು.

12.4 ವಿದ್ಯಾರ್ಥಿಯು ಪ್ರತಿ ಕೋರ್ಸ್‌ನಲ್ಲಿ ಪಾಸಾಗಲು ಎಲ್ಲಾ ಪರೀಕ್ಷೆಗಳನ್ನೊಳಗೊಂಡು ಕನಿಷ್ಠ 50 ಅಂಕಗಳನ್ನು ಪಡೆಯಬೇಕು. ಇಲ್ಲವಾದಲ್ಲಿ ಅನುತ್ತೀರ್ಣ ಎಂದು ಭಾವಿಸಿ "ಎಫ್" (F) ಚಿನ್ಹೆ ನೀಡಲಾಗುವುದು.

**13 ಪೂರಕ ಪರೀಕ್ಷೆಗಳು (Supplementary Examination) :**

13.1 ಡಿಪ್ಲೋಮಾ(ತೋಟಗಾರಿಕೆ)ದಲ್ಲಿಯ ಅಂತಿಮ ಲಿಖಿತ ಪರೀಕ್ಷೆಗೆ ಗೈರು ಹಾಜರಾದಲ್ಲಿ ಅದಕ್ಕೆ ಪೂರಕ ಪರೀಕ್ಷೆ ಇರುವುದಿಲ್ಲ. ಆ ಸಂದರ್ಭಗಳಲ್ಲಿ ವಿದ್ಯಾರ್ಥಿಯು ಮುಂಬರುವ ಶೈಕ್ಷಣಿಕ ವರ್ಷದಲ್ಲಿ ನಿಗದಿತ ಕೋರ್ಸ್‌ನ್ನು ಪ್ರಸ್ತಾಪಿಸಿ ದಾಗ (offered) ನೊಂದಾಯಿಸುವುದರೊಂದಿಗೆ ಪುನಾರಾವೃತ್ತಿ (repeat) ಮಾಡಬೇಕು.ಆಯಾ ಕೋರ್ಸ್‌ನಲ್ಲಿ ತೇರ್ಗಡೆಯಾಗಲು ನಿಗದಿಪಡಿಸಿದ ಕನಿಷ್ಟ ಅಂಕಗಳನ್ನು ಪಡೆಯುವಲ್ಲಿ ವಿದ್ಯಾರ್ಥಿಯು ವಿಫಲನಾದಾಗ, ಪೂರಕ (ಸಪ್ಲಿಮೆಂಟರಿ) ಪರೀಕ್ಷೆಗೆ ಅವಕಾಶವಿರುತ್ತದೆ.ಅಂತಹ ವಿದ್ಯಾರ್ಥಿಗಳು ಪ್ರತಿ ಕೋರ್ಸ್‌ಗೆ ರೂ. 120/– ಪರೀಕ್ಷಾ ಶುಲ್ಕದೊಂದಿಗೆ ಅಂತಿಮ ಪರೀಕ್ಷೆ ಫಲಿತಾಂಶ ಪ್ರಕಟಗೊಂಡ 10 ದಿನಗಳೊಳಗಾಗಿ ಮರು ನೋಂದಣಿ ಮಾಡಿಸಬೇಕು.

13.2 ಪೂರಕ ಪರೀಕ್ಷೆಗಳನ್ನು ಆಯಾ ವಿಷಯಗಳಲ್ಲಿ ಅಂತಿಮ ಲಿಖಿತ ಪರೀಕ್ಷೆಯ ಕ್ರಮದಂತೆಯೇ ಕೈಗೊಳ್ಳಬೇಕು.

13.3 ವಿದ್ಯಾರ್ಥಿಯು ಪೂರಕ ಪರೀಕ್ಷೆಯನ್ನು ತೆಗೆದುಕೊಂಡಾಗ ಆ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅವರ ಆ ವಿಷಯದ ಶ್ರೇಯಾಂಕ ಅಂಶ (ಗ್ರೇಡ್ ಪಾಯಿಂಟ್) ನಿರ್ಧರಿಸಲಾಗುವುದು.

13.4 ಪೂರಕ ಪರೀಕ್ಷೆಗೆ ವಿದ್ಯಾರ್ಥಿಯು ಗೈರು ಹಾಜರಾದಲ್ಲಿ ಅನುತ್ತೀರ್ಣ ಎಂದು "ಎಫ್" ಚಿನ್ಹೆ ನೀಡಲಾಗುವುದು.

13.5 ಅಂತಿಮ ಅಂಕಪಟ್ಟಿ ಪ್ರತಿಯು ವಿದ್ಯಾರ್ಥಿಗಳು ಅಭ್ಯಸಿಸಿದ ಪಠ್ಯ ಶೀರ್ಷಿಕೆ, ಗುಣಾಂಕ ಅವಧಿ, ಪಠ್ಯ ಕ್ರಮಸಂಖ್ಯೆ ಹಾಗೂ ಪಡೆದ ಅಂಕಗಳನ್ನು ಒಳಗೊಂಡಿರಿವುದು. ಒಟ್ಟಾರೆ ಅಭ್ಯಾಸಗೈದ ಒಟ್ಟು ಪಠ್ಯ ಗುಣಾಂಕ (ಕೋರ್ಸ್ ಕ್ರೆಡಿಟ್) ಆಧಾರದ ಮೇಲೆ ಸಂಚಿತ ಸರಾಸರಿ ಶ್ರೇಯಾಂಕ

ಅಂಶ (CGPA)ಹಾಗೂ ಒಟ್ಟಾರೆ ಸರಾಸರಿ ಶ್ರೇಯಾಂಕ ಅಂಶ (ಗ್ರೇಡ್ ಪಾಯಿಂಟ್) (OGPA)ಲೆಕ್ಕ ಮಾಡಲಾಗುವದು. ಪಡೆದ ಪ್ರತಿಶತ ಅಂಕಗಳನ್ನು ಓ.ಜಿ.ಪಿ.ಎ. ಪ್ರತಿಯಲ್ಲಿ ನಮೂದಿಸಲಾಗುವುದು.

13.6 ಡಿಪ್ಲೋಮಾ ಕೋರ್ಸ್‌ನಲ್ಲಿ ಶ್ರೇಣೀಕರಣ ಈ ಕೆಳಗಿನಂತಿದೆ.

| **ಶ್ರೇಯಾಂಕ ಅಂಶ** | **ಶ್ರೇಣಿ** |
|---|---|
| 8.50 ರಿಂದ 10.00 | ಪ್ರಶಸ್ತಿ ಸಹಿತ ಪ್ರಥಮ ದರ್ಜೆ(ಡಿಸ್ಟಿಂಕ್ಷನ್) |
| 7.50 ರಿಂದ 8.49 | ಪ್ರಥಮ ದರ್ಜೆ |
| 6.00 ರಿಂದ 7.49 | ದ್ವಿತಿಯ ದರ್ಜೆ |
| 5.00 ರಿಂದ 5.99 | ಉತ್ತೀರ್ಣ |
| 5.00 ಕ್ಕಿಂತ ಕಡಿಮೆ | ಅನುತ್ತೀರ್ಣ |

**14. ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್ ಮುಗಿಸಲು ಕಾಲಾವಧಿ**

**(Time limit for completion of Course) :**

ಒಮ್ಮೆ ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಯು ಈ ಕೋರ್ಸ್‌ಗೆ ನಿಗದಿಪಡಿಸಿದ ಅವಧಿಯ ನಂತರ, ಹೆಚ್ಚುವರಿಯಾಗಿ ಒಂದು ಶೈಕ್ಷಣಿಕ ವರ್ಷದಲ್ಲಿ (2 ಸೆಮಿಸ್ಟರ್) ಕೆಳಗಿನ ಕರಾರುಗಳಿಗೆ ಒಳಪಟ್ಟು ಈ ಕೋರ್ಸ್‌ನ್ನು ಉತ್ತೀರ್ಣರಾಗಿ ಮುಗಿಸಬೇಕು.

1. ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ನ ಶೇ. 75 ರಷ್ಟು ಕೋರ್ಸ್ ಕ್ರೆಡಿಟ್ಸ್‌ಗಳನ್ನು ಮುಗಿಸಿರಬೇಕು.
2. ಈ ಕೋರ್ಸ್‌ನಲ್ಲಿ ಅಭ್ಯರ್ಥಿಯು ಒಜಿಪಿಎ 5.0 ಕ್ಕಿಂತ ಹೆಚ್ಚಾಗಿರಬೇಕು. ಈ ಅವಧಿಯಲ್ಲಿ ವಿದ್ಯಾರ್ಥಿಯು ಕೋರ್ಸ್‌ನ್ನು ಮುಗಿಸದಿದ್ದಲ್ಲಿ ಅವರ ಪ್ರವೇಶವು ರದ್ದಾಗುವುದು.ಈ ಹೆಚ್ಚುವರಿ ಅವಧಿಗೆ ನಿಗದಿತ ಶುಲ್ಕವನ್ನು ವಿದ್ಯಾರ್ಥಿಯು ಭರಿಸಬೇಕಾಗುವುದು.

**15. ಶಿಷ್ಯವೇತನ/ಶಿಬಿರಾರ್ಥಿ ವೇತನ (Stipend) :**

ಡಿಪ್ಲೋಮಾ (ತೋಟಗಾರಿಕೆ) ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸರಕಾರಿ ಆದೇಶದನ್ವಯ ಮಾಸಿಕ ರೂ. 1000/– ಶಿಷ್ಯವೇತನವನ್ನು (ಸ್ಟೈಪೆಂಡ್) ನೀಡಲಾಗುವುದು. ಈ ಶಿಷ್ಯವೇತನ ಗರಿಷ್ಠ ನಾಲ್ಕು ಷಣ್ಮಾಷಿಕಗಳಿಗೆ ಮಾತ್ರ ಸೀಮಿತವಾಗಿರುವುದು. ಅಲ್ಲದೇ ಕೊನೆಯ ಸೆಮಿಸ್ಟರ್‌ರನ ಸ್ಟೈಪೆಂಡ್‌ನ್ನು ಕೋರ್ಸ್‌ನ್ನು ಪೂರ್ಣಗೊಳಿಸಿದ ನಂತರ ವಿದ್ಯಾರ್ಥಿಗಳಿಗೆ ನೀಡಲಾಗುವುದು. ಈ ಶಿಷ್ಯವೇತನ ಮುಂದುವರೆಸುವಿಕೆಯು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುವುದಲ್ಲದೇ ಪ್ರತಿ ವಿಷಯದಲ್ಲಿ ವಿದ್ಯಾರ್ಥಿಯ ಹಾಜರಾತಿಯು ಶೇ.80 ಕ್ಕಿಂತ ಕಡಿಮೆ ಇರಬಾರದು.

1. ಪ್ರತಿ ಷಾಣ್ಮಾಷಿಕದಲ್ಲಿನ ಒಟ್ಟಾರೆ ಗ್ರೇಡ್ ಪಾಯಿಂಟ್ ಸರಾಸರಿ (ಓಜಿಪಿಎ) 5.0 ಕ್ಕಿಂತ ಕಡಿಮೆ ಇರಬಾರದು.
2. ವಿದ್ಯಾರ್ಥಿಯು ನಿಗದಿತ ಅವಧಿಯೊಳಗೆ ಈ ಕೋರ್ಸ್‌ಗಳನ್ನು ಉತ್ತೀರ್ಣರಾಗಿ ಮುಗಿಸಬೇಕು.
3. ಕೋರ್ಸ್ ಅವಧಿಯಲ್ಲಿ ವಿದ್ಯಾರ್ಥಿಯ ನಡತೆ ಹಾಗೂ ಶೈಕ್ಷಣಿಕ ಪ್ರಗತಿ ಸಮಾಧಾನಕರವಾಗಿರಬೇಕು.

   ಈ ಮೇಲಿನ ಷರತ್ತುಗಳಿಗೆ ವಿದ್ಯಾರ್ಥಿಗಳು ಬದ್ಧವಾಗಿರದಿದ್ದ ಸಂದರ್ಭಗಳಲ್ಲಿ ಅಂತಹ ವಿದ್ಯಾರ್ಥಿಗಳ ಶಿಷ್ಯವೇತನವನ್ನು ರದ್ದುಗೊಳಿಸಲಾಗುವುದು.

15.1 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ನ ವಿದ್ಯಾರ್ಥಿಗಳು ಈ ಶಿಷ್ಯವೇತನದ ಹೊರತಾಗಿ ವಿಶ್ವವಿದ್ಯಾಲಯುದ ಇತರೆ ಯಾವುದೇ ಶಿಷ್ಯವೇತನ ಪಡೆಯುವಂತಿಲ್ಲ.

**16. ಪರೀಕ್ಷೆಗಳನ್ನು ನಡೆಸುವುದು ಹಾಗೂ ಅನುಚಿತ ಕ್ರಮಗಳನ್ನು ತಡೆಗಟ್ಟುವುದು (Conduct of examinations and Preventation of malpractices) :**

16.1 **ಶಿಕ್ಷಕರಿಗೆ ಹಾಗೂ ಸಂಬಂಧಪಟ್ಟ ಪ್ರಾಧಿಕಾರದವರಿಗೆ (For Teachers/ Authorities)** :

16.1.1 ಸಂಬಂಧಪಟ್ಟ ವಿಷಯದ ಶಿಕ್ಷಕರು ಸೆಮಿಸ್ಟರ್ ಪ್ರಾರಂಭದಲ್ಲಿ ವಿಷಯದ ಪಠ್ಯಕ್ರಮವನ್ನು ಪ್ರಾರಂಭಿಸುವ ಮೊದಲೇ ಆ ವಿಷಯದ ಮೌಲ್ಯಮಾಪನ

ಕ್ರಮವನ್ನು ತಯಾರಿಸಿ ವಿದ್ಯಾರ್ಥಿಗಳ ಗಮನಕ್ಕೆ ತರಬೇಕು ಹಾಗೂ ಈ ವಿವರದ ಒಂದು ಪ್ರತಿಯನ್ನು ಸಂಬಂಧಪಟ್ಟ ಸಂಯೋಜಕರ ಮುಖಾಂತರ ಡೀನ್‌ರವರಿಗೆ ಸಲ್ಲಿಸಬೇಕು.

16.1.2 ಪರೀಕ್ಷಾ ಪ್ರಶ್ನಾವಳಿಗಳನ್ನು ಬೆರಳಚ್ಚು ಮಾಡಿಸುವಾಗ ಸಂಬಂಧಪಟ್ಟ ವಿಷಯದ ಶಿಕ್ಷಕರು ಅಥವಾ ಅವರ ವಿಭಾಗದ ಇತರೆ ಒಬ್ಬ ಶಿಕ್ಷಕರು ಕಡ್ಡಾಯವಾಗಿ ಹಾಜರಿರಲೇಬೇಕು ಯಾವುದೇ ಸಂದರ್ಭಗಳಲ್ಲಿ ಆಯಾ ವಿಭಾಗದ ಶಿಕ್ಷಕ ಸಿಬ್ಬಂದಿಯನ್ನು ಹೊರತುಪಡಿಸಿ ಬೇರಾವುದೇ ಸಿಬ್ಬಂದಿಗೆ ಈ ಕಾರ್ಯವನ್ನು ವಹಿಸಬಾರದು.

16.1.3 ಪರೀಕ್ಷಾ ಪ್ರಶ್ನಾವಳಿಗಳನ್ನು ಗೌಪ್ಯವಾಗಿಡಲು ಎಲ್ಲಾ ರೀತಿಯ ಎಚ್ಚರಿಕೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

16.1.4. ಸಂಬಂಧಪಟ್ಟ ಸಂಯೋಜಕರು ಪರೀಕ್ಷಾಕೊಠಡಿಯಲ್ಲಿ ಯಾವುದೇ ಅನುಚಿತ ಕ್ರಮಗಳಿಗೆ ಅವಕಾಶವಾಗದಂತೆ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ಸೂಕ್ತ ಸ್ಥಳದ ವ್ಯವಸ್ಥೆ ಮಾಡಬೇಕು.

16.1.5 ಪರೀಕ್ಷೆ ಪ್ರಾರಂಭದ ವೇಳೆಯನಂತರ 10 ನಿಮಿಷ ತಡವಾಗಿ ಬಂದರೆ, ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕೊಡುವಂತಿಲ್ಲ. ಅದರಂತೆ ಆಭ್ಯರ್ಥಿಯು ಪರೀಕ್ಷೆಯ ಅವಧಿಯು ಕೊನೆಗೊಳ್ಳುವುದಕ್ಕಿಂತ 20 ನಿಮಿಷ ಮೊದಲು ಪರೀಕ್ಷಾ ಕೊಠಡಿಯಿಂದ ಹೊರ ಹೋಗಲು ಅವಕಾಶ ಕೊಡುವಂತಿಲ್ಲ.

16.1.6 ಪರೀಕ್ಷೆಗೆ ಹಾಜರಾಗಿರುವ ಅಭ್ಯರ್ಥಿಗಳು ತಮ್ಮೊಂದಿಗೆ ಯಾವುದೇ ರೀತಿಯ ಪುಸ್ತಕ, ಹಾಳೆಗಳು ಅಥವಾ ಬರವಣಿಗೆಗಳನ್ನು ಹೊಂದಿರದಂತೆ, ಪರೀಕ್ಷಾರ್ಥಿಗಳು ಒಬ್ಬರಿಗೊಬ್ಬರು ಸಹಾಯ ಹಾಗೂ ನಕಲು ಮಾಡದಂತೆ ಪುಸ್ತಕ ಅಥವಾ ಇತರೆ ಬರವಣಿಗೆಗಳಿಂದ ನಕಲು ಮಾಡದಂತೆ, ಶರೀರದ ಯಾವುದೇ ಅಂಗಗಳ ಮೇಲೆ ಬರೆಯದಂತೆ ಹಾಗೂ ಬೇರೆ ಯಾವುದೇ ರೀತಿಯ ಅನುಚಿತ ಮಾರ್ಗಗಳನ್ನು ಅನುಸರಿಸದಂತೆ ಪರೀಕ್ಷಾ ಮೇಲ್ವಿಚಾರಕರು ಅಥವಾ ಶಿಕ್ಷಕರು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಅಳವಡಿಸಿಕೊಂಡು ಪರೀಕ್ಷೆ ಕೈಗೊಳ್ಳಬೇಕು. ಪರೀಕ್ಷಾ ಕೊಠಡಿಯಲ್ಲಿ ಅಭ್ಯರ್ಥಿಗಳು ಮೋಬೈಲ್ ಫೋನ್ ಅಥವಾ ಯಾವುದೇ ಇಲೆಕ್ಟ್ರಾನಿಕ್ ವಸ್ತುಗಳನ್ನು (ಕ್ಯಾಲಕ್ಯುಲೇಟರ್ ಹೊರತುಪಡಿಸಿ) ಹೊಂದಿರಲು ಅವಕಾಶವಿರುವುದಿಲ್ಲ.

16.2.6 ವಿದ್ಯಾರ್ಥಿಗಳು ಪರೀಕ್ಷಾ ಮೇಲ್ವಿಚಾರಕರು ಅಥವಾ ಶಿಕ್ಷಕರು ಒದಗಿಸಿದ ಉತ್ತರ ಪತ್ರಿಕೆಗಳಲ್ಲಿ ಮಾತ್ರ ಉತ್ತರಗಳನ್ನು ಬರೆಯಬೇಕು.

16.2.7 ಈ ಮೇಲಿನ ಅನುಚಿತ ವರ್ತನೆಗಳಿಂದ ಯಾವುದೇ ವಿದ್ಯಾರ್ಥಿಯು ತಪ್ಪಿತಸ್ಥ ಎಂದು ಸಾಬೀತಾದಲ್ಲಿ ಅಂತಹ ವಿದ್ಯಾರ್ಥಿಗಳು ಶಿಕ್ಷಕರು ಕೇಳಿದಾಗ ಬರವಣಿಗೆಯಲ್ಲಿ ತಮ್ಮ ವಿವರಣೆಯನ್ನು ಅಥವಾ ಹೇಳಿಕೆಯನ್ನು ಪರೀಕ್ಷಾ ಮೇಲ್ವಿಚಾರಕರಿಗೆ ಅಥವಾ ಶಿಕ್ಷಕರಿಗೆ ಸಲ್ಲಿಸಬೇಕು. ಒಂದು ವೇಳೆ ಹೇಳಿಕೆ ಅಥವಾ ವಿವರಣೆಯನ್ನು ನೀಡಲು ವಿದ್ಯಾರ್ಥಿಯು ನಿರಾಕರಿಸಿದಲ್ಲಿ ಶಿಕ್ಷಕರು ಅದನ್ನು ಬರವಣಿಗೆಯಲ್ಲಿ ದಾಖಲಿಸಿಕೊಳ್ಳಬೇಕು.

16.2.8 ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯಲ್ಲಿ ಏನನ್ನೂ ಬರೆಯಬಾರದು ಮತ್ತು ಉತ್ತರ ಪತ್ರಿಕೆಯನ್ನು ವಿರೂಪಗೊಳಿಸುವದಾಗಲಿ, ಅಸಿಂಧು ಚಿನ್ಹೆಗಳಿಂದ ಗುರುತಿಸುವುದಾಗಲಿ ಮಾಡಬಾರದು.

16.2.9 ಯಾವುದೇ ವಿದ್ಯಾರ್ಥಿಯು ಮೇಲಿನ ನಿಯಮ ನಿಬಂಧನೆಗಳಿಗೆ ಒಳಪಟ್ಟು ಸೂಕ್ತವಾಗಿ ನಡೆದುಕೊಳ್ಳದಿದ್ದಲ್ಲಿ ಅದನ್ನು ಅಪರಾಧವೆಂದು ಪರಿಗಣಿಸಿ ಅಂತಹವರನ್ನು ಮುಂದಿನ ಶಿಕ್ಷೆಗೆ/ದಂಡಗಳಿಗೆ ಒಳಪಡಿಸಲಾಗುವುದು.

**17. ವಿದ್ಯಾರ್ಥಿಗಳು ಶಿಸ್ತು ಕಾಪಾಡಿಕೊಳ್ಳುವುದು (Maintenance of discipline among the studetns) :**

17.1 ವಿಶ್ವವಿದ್ಯಾಲಯದ ಶಿಸ್ತು ನಿಯಮಾವಳಿಗಳಿಗೆ ವಿದ್ಯಾರ್ಥಿಯು ಬದ್ಧನಾಗಿರಬೇಕು ಹಾಗೂ ವಿಶ್ವವಿದ್ಯಾಲಯದ ಶಿಕ್ಷಕರನ್ನು ಹಾಗೂ ಅಧಿಕಾರಿಗಳನ್ನು ಗೌರವದಿಂದ ಕಾಣಬೇಕು.

17.2 ಪ್ರತಿಯೊಬ್ಬ ವಿದ್ಯಾರ್ಥಿಯು ಸಂಸ್ಥೆಯ ಮುಖ್ಯಸ್ಥರ ಅಥವಾ ಡೀನ್‌ರವರ ರುಜು ಹೊಂದಿದ ತನ್ನ ಭಾವ ಚಿತ್ರವನ್ನೊಳಗೊಂಡ "ಗುರುತಿನ ಚೀಟಿ" ಯನ್ನು ಮಹಾವಿದ್ಯಾಲಯದಿಂದ ಪಡೆಯಬೇಕು.

17.3 ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಹಾಗೂ ಇತರೆ ಸಾರ್ವಜನಿಕ ಅಸ್ತಿಪಾಸ್ತಿಗಳನ್ನು ಸಂರಕ್ಷಿಸಿ, ಅವುಗಳನ್ನು ನಿಯಂತ್ರಿತವಾಗಿ (ಅವಶ್ಯಕತೆಗನುಗುಣವಾಗಿ) ಉಪಯೋಗಿಸಿಕೊಳ್ಳಬೇಕು.ಯಾವುದೇ

ವಿದ್ಯಾರ್ಥಿಯು ಸಾರ್ವಜನಿಕ ಹಾಗೂ ವಿಶ್ವವಿದ್ಯಾಲಯದ ಆಸ್ತಿಯನ್ನು ಹಾನಿಗೊಳಿಸಬಾರದು.

17.4 ವಿದ್ಯಾರ್ಥಿಗಳು ಬೋಧನಾ ಕೊಠಡಿಗಳಲ್ಲಿ, ವಿದ್ಯಾರ್ಥಿ ವಸತಿಗೃಹದಲ್ಲಿ, ಗ್ರಂಥಾಲಯದಲ್ಲಿ, ಪ್ರಯೋಗಾಲಯದಲ್ಲಿ ಪ್ರಾಯೋಗಿಕ ಕ್ಷೇತ್ರಗಳಲ್ಲಿ, ಸಾರಿಗೆ ವಾಹನಗಳಲ್ಲಿ ಅನುಚಿತವಾಗಿ ವರ್ತಿಸದೆ ಸಂಯಮದಿಂದ ಶಿಸ್ತುಬದ್ಧವಾಗಿ ನಡೆದುಕೊಳ್ಳಬೇಕು.

17.5 ಯಾವುದೇ ವಿದ್ಯಾರ್ಥಿಯು ಸಂಸ್ಥೆಯ ಒಳಾವರಣ ಅಥವಾ ಹೊರಾವರಣದಲ್ಲಿ ಅನುಚಿತ ವರ್ತನೆಯಿಂದ ಅನಧಿಕೃತ ಗುಂಪುಗಾರಿಕೆಯಿಂದ ಹಾಗೂ ಕೆಟ್ಟನಡತೆಯಿಂದ ಸಂಸ್ಥೆಯ ಸಾಮಾನ್ಯ ಕೆಲಸಕಾರ್ಯಗಳಿಗೆ ಅಡಚಣೆ ಮಾಡುವಂತಿಲ್ಲ.

17.6 ವಿದ್ಯಾರ್ಥಿಯು ದಿನನಿತ್ಯ ತಪ್ಪದೇ ತರಗತಿಗಳಿಗೆ ಹಾಜರಾಗಬೇಕು. ತರಗತಿಗಳಿಗೆ ತಡವಾಗಿ ಬರಕೂಡದು.ತಡವಾಗಿ ಬರುವವರನ್ನು ಶಿಕ್ಷಕರು ಶಿಸ್ತುಕ್ರಮವಾಗಿ ಪ್ರವೇಶವನ್ನು ನಿರಾಕರಿಸಬಹುದಾಗಿದೆ.

17.7 ಸಾಮೂಹಿಕವಾಗಿ ಎಲ್ಲರೂ ತರಗತಿಗಳಿಗೆ ಹಾಗೂ ಪರೀಕ್ಷೆಗಳಿಗೆ ಗೈರು ಆಗುವುದನ್ನು "ಅಶಿಸ್ತು" ಎಂದು ಪರಿಗಣಿಸಲಾಗುವುದು.

17.8 ಸಂಸ್ಥೆಯ ಅವರಣದಲ್ಲಿ ವಿದ್ಯಾರ್ಥಿಯು ಮಾದಕ ಪಾನೀಯಗಳನ್ನು ಹೊಂದಿರುವುದು ಅಥವಾ ಸೇವಿಸುವುದನ್ನು ಹಾಗೂ ಜೂಜಾಟವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

17.9 ನಿಗದಿತ ದಿನಗಳಂದು ಹೊರತುಪಡಿಸಿ ಉಳಿದ ದಿನಗಳಲ್ಲಿ ಹಬ್ಬಗಳನ್ನು ಆಚರಿಸುವುದು ಹಾಗೂ ಈ ಸಂದರ್ಭಗಳಲ್ಲಿ ಅನುಚಿತ ವರ್ತನೆಯನ್ನು "ಅಶಿಸ್ತಿನ" ವರ್ತನೆಯೆಂದು ಪರಿಗಣಿಸಲಾಗುವುದು.

17.10 ಮೇಲಿನ ಯಾವುದೇ ನಿಯಮ ನಿಬಂಧನೆಗಳ ಉಲ್ಲಂಘನೆಯನ್ನು "ಅಶಿಸ್ತಿನ" ವರ್ತನೆಯೆಂದು ಪರಿಗಣಿಸಿ ಸದರಿ ವಿಷಯವನ್ನು ಸಂಸ್ಥೆಯ ಮುಖ್ಯಸ್ಥರು (ಸಂಯೋಜಕರು) ಅಥವಾ ಡೀನ್‌ರವರ ಗಮನಕ್ಕೆ ತರಬೇಕು.

17.11 ಸಂಸ್ಥೆಯ ಮುಖ್ಯಸ್ಥರು ಅಥವಾ ಡೀನ್‌ರವರು ಸದರಿ ವಿಷಯವನ್ನು ವಿಚಾರಣೆ ನಡೆಸಿ ತಕ್ಷಣದ ಕ್ರಮವಾಗಿ ವಿದ್ಯಾರ್ಥಿಗೆ ಎಚ್ಚರಿಕೆ ನೀಡುವುದು, ದಂಡ ವಿಧಿಸುವುದು, ವಿದ್ಯಾರ್ಥಿನಿಲಯದಿಂದ ಹೊರಹಾಕುವುದು ಹಾಗೂ ಗರಿಷ್ಠ ಒಂದು ತಿಂಗಳ ಮಟ್ಟಿಗೆ ತರಗತಿಗಳಿಗೆ ಹಾಜರಾಗದಂತೆ ಅಮಾನತ್ತುಗೊಳಿಸುವುದು, ಈ ಮುಂತಾದ ಶಿಸ್ತು ಕ್ರಮಗಳನ್ನು ಕೈಗೊಳ್ಳಬೇಕು.ಸಂಸ್ಥೆಯ ಆವರಣದಲ್ಲಿ ರ್‍ಯಾಗಿಂಗ್ ನಿಷಿದ್ಧವಾಗಿದ್ದು, ಇದರ ಪಾಲನೆಗೆ ವಿದ್ಯಾರ್ಥಿಗಳು ಬದ್ಧರಾಗಿರತಕ್ಕದ್ದು.

17.12. ಮುಂದುವರೆದು, ಗಂಭೀರ ಸಂದರ್ಭಗಳಲ್ಲಿ, ಡೀನ್‌ರವರ ಅಧ್ಯಕ್ಷತೆಯಲ್ಲಿ, ಮೂವರು ಹಿರಿಯ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿನಿಲಯದ ಪಾಲಕರನ್ನೊಳಗೊಂಡ ಶಿಸ್ತು ಸಮಿತಿಯು ವಿಚಾರಣೆ ನಡೆಸಿ ಶಿಸ್ತುಕ್ರಮಗಳ ವಿವರವನ್ನು ಡೀನ್‌ರವರ ಮುಂದಿನ ಕ್ರಮಕ್ಕೆ ಸಲ್ಲಿಸಬೇಕು.

17.13. ಈ ಮೇಲಿನ ಎಲ್ಲಾ ನಿಯಮಗಳ ಜೊತೆಗೆ ಮಾನ್ಯ ಮಾಡಬಹುದಾದಂತಹ ಇತರೆ ನಿಯಮ ನಿಬಂಧನೆಗಳನ್ನು ವಿದ್ಯಾರ್ಥಿಗಳು ಪಾಲಿಸಬೇಕಾದದ್ದು ಕಡ್ಡಾಯವಾಗಿದ್ದು, ತಪ್ಪಿದ್ದಲ್ಲಿ ಸಂಬಂದಪಟ್ಟಂತೆ ಮಾನ್ಯ ಕುಲಪತಿಗಳ ನಿರ್ಧಾರವೇ ಅಂತಿಮವಾದದ್ದು.

## 18. ಫಲಿತಾಂಶ ಅನುಮೋದಿಸುವ ಹಾಗೂ ಪ್ರಮಾಣ ಪತ್ರ ನೀಡುವ ಪ್ರಾಧಿಕಾರ (Authorities to approve the results and issue of pass certificates, etc ) :

18.1 ಡೀನ್‌ರವರು, ಡೀನ್ ಸ್ನಾತಕೋತ್ತರವರು,ಕುಲಸಚಿವರು, ಹಾಗೂ ಶಿಕ್ಷಣ ನಿರ್ದೇಶಕರು ಶಿಫಾರಸ್ಸು ಮಾಡಿದ ಫಲಿತಾಂಶಗಳನ್ನು ಕುಲಪತಿಗಳು ಅನುಮೋದಿಸುವ ಅಧಿಕಾರ ಹೊಂದಿರುವರು. ಕುಲಸಚಿವರು ಸಂಬಂಧಪಟ್ಟ ವಿಷಯದ ತಾತ್ಪೂರ್ತಿಕ ಅಂಕಪಟ್ಟಿ ಹಾಗೂ ಕೋರ್ಸ್‌ನ ಪ್ರಮಾಣ ಪತ್ರಗಳನ್ನು ಯಶಸ್ವಿಯಾಗಿ ಪೂರೈಸಿದ ವಿದ್ಯಾರ್ಥಿಗಳಿಗೆ ಬೇಬಾಕಿ ವಿವರ ಖಾತ್ರಿಪಡಿಸಿಕೊಂಡು ಒದಗಿಸುವುದು.ಅಂತಿಮ ಫಲಿತಾಂಶಗಳನ್ನು ಸಂಬಂಧಪಟ್ಟಅಧ್ಯಯನ ಮಂಡಳಿ (ಬೋರ್ಡ ಆಫ್ ಸ್ಟಡಿಸ್) ವಿದ್ಯಾವಿಷಯಕ ಪರಿಷತ್ (ಅಕ್ಯಾಡೆಮಿಕ್ ಕೌನ್ಸಿಲ್) ಹಾಗೂ ವ್ಯವಸ್ಥಾಪನಾ ಮಂಡಳಿಯು ಶಿಫಾರಸ್ಸನ್ನು ದೃಢೀಕರಿಸುವ ಅಧಿಕಾರ ಹೊಂದಿದೆ.

18.2 ವಿದ್ಯಾರ್ಥಿಯು ತನ್ನ ಹೆಸರಿನಲ್ಲಿ ಏನಾದರೂ ಬದಲಾವಣೆ ಬಯಸಿದ್ದರೆ, ಸೂಕ್ತ ಕಾನೂನಿನ ಕ್ರಮಗಳ ಅನುಸಾರ ಅಫಿಡವೇಟ್‌ದೊಂದಿಗೆ ವಿದ್ಯಾರ್ಥಿಯು ತನ್ನ ಹೆಸರನ್ನು ಬದಲಾವಣೆ ಮಾಡಿಕೊಂಡಿರಬೇಕು ಅಂತಹ ಸಂದರ್ಭಗಳಲ್ಲಿ ಮಾತ್ರ ಈ ದಾಖಲೆಗಳನುಸಾರ ವಿದ್ಯಾರ್ಥಿಯ ಅಂಕಪಟ್ಟಿ ಹಾಗೂ ಕೋರ್ಸ್‌ನ ಪ್ರಮಾಣ ಪತ್ರದಲ್ಲಿ ಹೆಸರನ್ನು ಸೂಕ್ತವಾಗಿ ಬದಲಾವಣೆ ಮಾಡಬಹುದಾಗಿರುತ್ತದೆ. ಆದರೆ, ಅಂತಹ ವಿವರ ದಾಖಲೆಗಳನ್ನು ಪ್ರಮಾಣ ಪತ್ರ ಹಾಗೂ ಅಂಕಪಟ್ಟಿ ಒದಗಿಸಲು ನಿಗದಿಯಾದ ದಿನಾಂಕದೊಳಗೆ ಕುಲಸಚಿವರಿಗೆ ನಿವೇದನೆ ಸಲ್ಲಿಸಬೇಕು.ಒಂದು ವೇಳೆ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರ ನೀಡಿದ ನಂತರ ಹೆಸರು ಬದಲಾವಣೆಗೆ ವಿವರ ದಾಖಲೆ ಹಾಗೂ ನಿವೇದನೆ ಸಲ್ಲಿಸಿದಲ್ಲಿ ವಿಶ್ವವಿದ್ಯಾಲಯವು ಅದನ್ನು ಪರಿಗಣಿಸುವುದಿಲ್ಲ ಹಾಗೂ ವಿದ್ಯಾರ್ಥಿಯ ಹೆಸರನ್ನು ಬದಲಾವಣೆ ಮಾಡುವುದಿಲ್ಲ.

**19. ತಿದ್ದುಪಡಿ ಅಥವಾ ಫಲಿತಾಂಶ ರದ್ದುಪಡಿಸುವಿಕೆ (Amendment or cancellation of result ) :**

ಯಾವುದೇ ವಿದ್ಯಾರ್ಥಿಯ ಫಲಿತಾಂಶವು ಅನುಚಿತ ಕ್ರಮಗಳಿಂದಾಗಿ, ತಪ್ಪಿನಿಂದಾಗಿ ಅಥವಾ ಅನುಚಿತ ವರ್ತನೆಯಿಂದಾಗಿ ಹಾಳಾಗುವುದರೊಂದಿಗೆ, ಆ ವಿದ್ಯಾರ್ಥಿಗೆ ಇದರಿಂದ ಅನುಕೂಲವಾಗುವ ಸಂದರ್ಭಗಳಲ್ಲಿ ವಿದ್ಯಾ ವಿಷಯಕ ಪರಿಷತ್ ಹಾಗೂ ವ್ಯವಸ್ಥಾಪನಾ ಮಂಡಳಿ ಇಂತಹ ವಿದ್ಯಾರ್ಥಿಗಳ ಫಲಿತಾಂಶವನ್ನು ತಿದ್ದುಪಡಿ ಮಾಡಲು ಅಥವಾ ರದ್ದುಗೊಳಿಸಲು ಅಥವಾ ಸಂದರ್ಭಕ್ಕೆ ಅನುಸಾರ ಸಮಂಜಸ ಆದೇಶಗಳನ್ನು ನೀಡಲು ಅಧಿಕಾರ ಹೊಂದಿರುವರು.

[

**20. ವಿದ್ಯಾರ್ಥಿನಿಲಯ ಸೌಲಭ್ಯ (Hostel Facility) :**

20.1 ಆವರಣದಲ್ಲಿ ವಿದ್ಯಾರ್ಥಿ ನಿಲಯಕ್ಕೆ ಮೊದಲು ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಆದ್ಯತೆ ಹಾಗೂ ಲಭ್ಯತೆ ಮೇರೆಗೆ ವಿದ್ಯಾರ್ಥಿನಿಲಯದಲ್ಲಿ ಅವಕಾಶ ನೀಡಲಾಗುವುದು. ವಿದ್ಯಾರ್ಥಿನಿಲಯದ ಪ್ರವೇಶಕ್ಕೆ, ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿ ನಿಲಯದ ವಾರ್ಡನ್‌ಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.

20.2 ಪ್ರವೇಶ ಪಡೆಯುವ ಸಮಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಒಂದು ಸಾರಿಯ ಭೋಜನಶಾಲೆ ಠೇವಣಿಯನ್ನು ಮುಂದಿನಂತೆ ಪಾವತಿಸಬೇಕು.ಈ ಹಣವನ್ನು ವಿದ್ಯಾರ್ಥಿಯು ವಿದ್ಯಾರ್ಥಿನಿಲಯವನ್ನು ಬಿಟ್ಟುಹೋಗುವ ಸಂದರ್ಭದಲ್ಲಿ ಆತನ ಎಲ್ಲ ಬಾಕಿಗಳು ಪಾವತಿಯಾಗಿರುವ ಮೇರೆಗೆ ಹಿಂದಿರುಗಿಸಲಾಗುವುದು.

i) ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1ರವರಿಗೆ– ರೂ. 3,000/–

ii) ಇತರರಿಗೆ –ರೂ. 6,000/–

20.3 ಮೇಲಿನ ಶುಲ್ಕಗಳೊಂದಿಗೆ ಪ್ರವೇಶದ ಸಮಯದಲ್ಲಿ ಹಾಗೂ ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಪ್ರತಿ ವಿದ್ಯಾರ್ಥಿಯು ಕೆಳಗಿನಂತೆ ಶುಲ್ಕವನ್ನು ಪಾವತಿಸಬೇಕು.

| | | |
|---|---|---|
| i) | ಅರ್ಜಿ ಶುಲ್ಕ (+ ನಿಬಂಧನಾ ಪುಸ್ತಕ) | – ರೂ. 100/– |
| ii) | ಪ್ರವೇಶ ಶುಲ್ಕ | – ರೂ. 100/– |
| iii) | ಮರುಪ್ರವೇಶ ಶುಲ್ಕ | – ರೂ. 100/– |
| iv) | ಕ್ರೀಡೆ ಮತ್ತು ವಾಚನಾಲಯ ಶುಲ್ಕ | – ರೂ. 150/– |
| v) | ಪಾತ್ರೆಗಳ ನಿರ್ವಹಣೆ | – ರೂ. 150/– |

20.4 ವಿದ್ಯಾರ್ಥಿನಿಲಯದಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯು ಈ ಮುಂದಿನಂತೆ ಪ್ರತಿ ತಿಂಗಳು ಶುಲ್ಕವನ್ನು ಪಾವತಿಸಬೇಕು.

i) ವಿದ್ಯುತ್‌ಚ್ಛಕ್ತಿ ಬಿಲ್: ಇದನ್ನು ಆಯಾ ಕಾಲಕ್ಕೆ ವಿಶ್ವವಿದ್ಯಾನಿಲಯವು ನಿಗದಿಪಡಿಸುವ ಮಾರ್ಗದರ್ಶಿಗಳನ್ವಯ ಆಯಾ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವುದು.
ಮುಖ್ಯವಾರ್ಡನ್/ವಾರ್ಡನ್‌ರವರು ತಿಳಿಸುವಂತೆ ಭೋಜನಶಾಲೆ ವೆಚ್ಚ ಮತ್ತು ದಂಡ

| | | |
|---|---|---|
| ii) | ಸಿಬ್ಬಂದಿ ಶುಲ್ಕ | – ರೂ. 160/– ಪ್ರತಿ ತಿಂಗಳಿಗೆ |
| iii) | ಕೊಠಡಿ ಬಾಡಿಗೆ | – ರೂ. 75/– ಪ್ರತಿ ತಿಂಗಳಿಗೆ |
| iv) | ವಿದ್ಯಾರ್ಥಿ ನಿಲಯದ ಅಭಿವೃದ್ಧಿ ನಿಧಿ | – ರೂ. 75/– ಪ್ರತಿ ತಿಂಗಳಿಗೆ |

ವಿದ್ಯಾರ್ಥಿನಿಲಯಗಳನ್ನು ನಡೆಸುವ ನಿಯಮಾವಳಿಗಳ ಪ್ರತಿಯನ್ನು ಪ್ರತಿಯೊಬ್ಬ ವಿದ್ಯಾರ್ಥಿಗೆ ಅವರು ವಿದ್ಯಾರ್ಥಿ ನಿಲಯದ ಪ್ರವೇಶದ ಸಮಯದಲ್ಲಿ ನೀಡಲಾಗುತ್ತದೆ.

**21. ಇತರೆ ವಿಷಯಗಳು (Savings) :**

21.1 ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಸಂಬಂಧಪಟ್ಟಂತೆ ವಿದ್ಯಾ ವಿಷಯಕ ಪರಿಷತ್‌ನ ಯಾವುದೇ ನಿಬಂಧನೆಗಳು ಈ ಕೋರ್ಸ್‌ನ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಯಾವುದೇ ಸಂದರ್ಭಗಳಲ್ಲಿ ಸೂಕ್ತ ರೀತಿಯಲ್ಲಿ ಬಗೆಹರಿಸುವ ಅಥವಾ ವಿದ್ಯಾರ್ಥಿಗಳ ವಿಷಯದಲ್ಲಿ ಸೂಕ್ತವಾಗಿ ಸ್ಪಂದಿಸುವ ಹಕ್ಕನ್ನು ಮೊಟಕುಗೊಳಿಸುವುದಿಲ್ಲ.

21.2 ವಿದ್ಯಾವಿಷಯಕ ಪರಿಷತ್‌ನಿಂದ ಕಾಲಕಾಲಕ್ಕೆ ಆಗುವ ತಿದ್ದುಪಡಿಗಳು, ಅದು ನಿಗದಿಪಡಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ ಹಾಗೂ ಆ ದಿನಾಂಕದಂದು ನೋಂದಣಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳು ಈ ನಿಬಂಧನೆಗಳಿಗೆ ಒಳಪಡುತ್ತಾರೆ.

21.3 ಈ ನಿಯಮ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳುವಾಗ ಯಾವುದೇ ರೀತಿಯ ತೊಂದರೆ, ಅಡಚಣೆಗಳು ಕಂಡುಬಂದಲ್ಲಿ ಅಥವಾ ಕೆಲವು ನಿಯಮಗಳನ್ನು ಅರ್ಥೈಸುವಲ್ಲಿ ಸಾಧ್ಯವಿಲ್ಲದಾಗ, ವಿದ್ಯಾ ವಿಷಯಕ ಪರಿಷತ್‌ನ ನಿರ್ಧಾರವೇ ಅಂತಿಮವಾದದ್ದು ಎಲ್ಲರೂ ಆ ನಿರ್ಧಾರಕ್ಕೆ ಬದ್ದರಾಗಿರುವರು.

21.4 ಈ ನಿಬಂಧನೆಗಳಲ್ಲಿ ಕೊಡಲಾದ ಯಾವುದೇ ಅಥವಾ ಎಲ್ಲ ನಿಯಮಗಳನ್ನು ವಿಶ್ವವಿದ್ಯಾಲಯವು ಕಾಲ ಕಾಲಕ್ಕೆ ತಿದ್ದುಪಡಿ ಮಾಡುತ್ತದೆ ಹಾಗೂ ಅವುಗಳನ್ನು ಪಾಲಿಸುವುದಾಗಿ ವಿದ್ಯಾರ್ಥಿಯು ಮುಚ್ಚಳಿಕೆ ಪತ್ರವನ್ನು ಬರೆದುಕೊಡಬೇಕು.

**22. ಒಟ್ಟಾರೆ ಸರಾಸರಿ ಶ್ರೇಯಾಂಕ ಅಂಶ (Overall Grade Point Average)**

**ಪರಿವರ್ತನೆ ಕೋಷ್ಟಕ :ಅನುಬಂಧ –1**

**(ಓಜಿಪಿಎ ಗೆ ಸಮನಾದ ಶೇಕಡಾವಾರು ಅಂಕಗಳು – 10 ಪಾಯಿಂಟ್ ಸ್ಕೇಲ್)**

| ಓಜಿಪಿಎ | 5 | 6 | 7 | 8 | 9 |
|---|---|---|---|---|---|
| 0.00 | 50.0 | 60.0 | 70.0 | 80.0 | 90.0 |
| 0.01 | 50.1 | 60.1 | 70.1 | 80.1 | 90.1 |
| 0.02 | 50.2 | 60.2 | 70.2 | 80.2 | 90.2 |
| 0.03 | 50.3 | 60.3 | 70.3 | 80.3 | 90.3 |
| 0.04 | 50.4 | 60.4 | 70.4 | 80.4 | 90.4 |
| 0.05 | 50.5 | 60.5 | 70.5 | 80.5 | 90.5 |
| 0.06 | 50.6 | 60.6 | 70.6 | 80.6 | 90.6 |
| 0.07 | 50.7 | 60.7 | 70.7 | 80.7 | 90.7 |
| 0.08 | 50.8 | 60.8 | 70.8 | 80.8 | 90.8 |
| 0.09 | 50.9 | 60.9 | 70.9 | 80.9 | 90.9 |
| 0.10 | 51.0 | 61.0 | 71.0 | 81.0 | 91.0 |
| 0.11 | 51.1 | 61.1 | 71.1 | 81.1 | 91.1 |
| 0.12 | 51.2 | 61.2 | 71.2 | 81.2 | 91.2 |
| 0.13 | 51.3 | 61.3 | 71.3 | 81.3 | 91.3 |
| 0.14 | 51.4 | 61.4 | 71.4 | 81.4 | 91.4 |
| 0.15 | 51.5 | 61.5 | 71.5 | 81.5 | 91.5 |
| 0.16 | 51.6 | 61.6 | 71.6 | 81.6 | 91.6 |
| 0.17 | 51.7 | 61.7 | 71.7 | 81.7 | 91.7 |
| 0.18 | 51.8 | 61.8 | 71.8 | 81.8 | 91.8 |
| 0.19 | 51.9 | 61.9 | 71.9 | 81.9 | 91.9 |
| 0.20 | 52.0 | 62.0 | 72.0 | 82.0 | 92.0 |
| 0.21 | 52.1 | 62.1 | 72.1 | 82.1 | 92.1 |
| 0.22 | 52.2 | 62.2 | 72.2 | 82.2 | 92.2 |
| 0.23 | 52.3 | 62.3 | 72.3 | 82.3 | 92.3 |
| 0.24 | 52.4 | 62.4 | 72.4 | 82.4 | 92.4 |
| 0.25 | 52.5 | 62.5 | 72.5 | 82.5 | 92.5 |
| 0.26 | 52.6 | 62.6 | 72.6 | 82.6 | 92.6 |

| ಓಜಿಪಿಎ | 5 | 6 | 7 | 8 | 9 |
|---|---|---|---|---|---|
| 0.27 | 52.7 | 62.7 | 72.7 | 82.7 | 92.7 |
| 0.28 | 52.8 | 62.8 | 72.8 | 82.8 | 92.8 |
| 0.29 | 52.9 | 62.9 | 72.9 | 82.9 | 92.9 |
| 0.30 | 53.0 | 63.0 | 73.0 | 83.0 | 93.0 |
| 0.31 | 53.1 | 63.1 | 73.1 | 83.1 | 93.1 |
| 0.32 | 53.2 | 63.2 | 73.2 | 83.2 | 93.2 |
| 0.33 | 53.3 | 63.3 | 73.3 | 83.3 | 93.3 |
| 0.34 | 53.4 | 63.4 | 73.4 | 83.4 | 93.4 |
| 0.35 | 53.5 | 63.5 | 73.5 | 83.5 | 93.5 |
| 0.36 | 53.6 | 63.6 | 73.6 | 83.6 | 93.6 |
| 0.37 | 53.7 | 63.7 | 73.7 | 83.7 | 93.7 |
| 0.38 | 53.8 | 63.8 | 73.8 | 83.8 | 93.8 |
| 0.39 | 53.9 | 63.9 | 73.9 | 83.9 | 93.9 |
| 0.40 | 54.0 | 64.0 | 74.0 | 84.0 | 94.0 |
| 0.41 | 54.1 | 64.1 | 74.1 | 84.1 | 94.1 |
| 0.42 | 54.2 | 64.2 | 74.2 | 84.2 | 94.2 |
| 0.43 | 54.3 | 64.3 | 74.3 | 84.3 | 94.3 |
| 0.44 | 54.4 | 64.4 | 74.4 | 84.4 | 94.4 |
| 0.45 | 54.5 | 64.5 | 74.5 | 84.5 | 94.5 |
| 0.46 | 54.6 | 64.6 | 74.6 | 84.6 | 94.6 |
| 0.47 | 54.7 | 64.7 | 74.7 | 84.7 | 94.7 |
| 0.48 | 54.8 | 64.8 | 74.8 | 84.8 | 94.8 |
| 0.49 | 54.9 | 64.9 | 74.9 | 84.9 | 94.9 |
| 0.50 | 55.0 | 65.0 | 75.0 | 85.0 | 95.0 |
| 0.51 | 55.1 | 65.1 | 75.1 | 85.1 | 95.1 |
| 0.52 | 55.2 | 65.2 | 75.2 | 85.2 | 95.2 |
| 0.53 | 55.3 | 65.3 | 75.3 | 85.3 | 95.3 |
| 0.54 | 55.4 | 65.4 | 75.4 | 85.4 | 95.4 |
| 0.55 | 55.5 | 65.5 | 75.5 | 85.5 | 95.5 |
| 0.56 | 55.6 | 65.6 | 75.6 | 85.6 | 95.6 |
| 0.57 | 55.7 | 65.7 | 75.7 | 85.7 | 95.7 |
| 0.58 | 55.8 | 65.8 | 75.8 | 85.8 | 95.8 |

| ಓಜಿಪಿಎ | 5 | 6 | 7 | 8 | 9 |
|---|---|---|---|---|---|
| 0.59 | 55.9 | 65.9 | 75.9 | 85.9 | 95.9 |
| 0.60 | 56.0 | 66.0 | 76.0 | 86.0 | 96.0 |
| 0.61 | 56.1 | 66.1 | 76.1 | 86.1 | 96.1 |
| 0.62 | 56.2 | 66.2 | 76.2 | 86.2 | 96.2 |
| 0.63 | 56.3 | 66.3 | 76.3 | 86.3 | 96.3 |
| 0.64 | 56.4 | 66.4 | 76.4 | 86.4 | 96.4 |
| 0.65 | 56.5 | 66.5 | 76.5 | 86.5 | 96.5 |
| 0.66 | 56.6 | 66.6 | 76.6 | 86.6 | 96.6 |
| 0.67 | 56.7 | 66.7 | 76.7 | 86.7 | 96.7 |
| 0.68 | 56.8 | 66.8 | 76.8 | 86.8 | 96.8 |
| 0.69 | 56.9 | 66.9 | 76.9 | 86.9 | 96.9 |
| 0.70 | 57.0 | 67.0 | 77.0 | 87.0 | 97.0 |
| 0.71 | 57.1 | 67.1 | 77.1 | 87.1 | 97.1 |
| 0.72 | 57.2 | 67.2 | 77.2 | 87.2 | 97.2 |
| 0.73 | 57.3 | 67.3 | 77.3 | 87.3 | 97.3 |
| 0.74 | 57.4 | 67.4 | 77.4 | 87.4 | 97.4 |
| 0.75 | 57.5 | 67.5 | 77.5 | 87.5 | 97.5 |
| 0.76 | 57.6 | 67.6 | 77.6 | 87.6 | 97.6 |
| 0.77 | 57.7 | 67.7 | 77.7 | 87.7 | 97.7 |
| 0.78 | 57.8 | 67.8 | 77.8 | 87.8 | 97.8 |
| 0.79 | 57.9 | 67.9 | 77.9 | 87.9 | 97.9 |
| 0.80 | 58.0 | 68.0 | 78.0 | 88.0 | 98.0 |
| 0.81 | 58.1 | 68.1 | 78.1 | 88.1 | 98.1 |
| 0.82 | 58.2 | 68.2 | 78.2 | 88.2 | 98.2 |
| 0.83 | 58.3 | 68.3 | 78.3 | 88.3 | 98.3 |
| 0.84 | 58.4 | 68.4 | 78.4 | 88.4 | 98.4 |
| 0.85 | 58.5 | 68.5 | 78.5 | 88.5 | 98.5 |
| 0.86 | 58.6 | 68.6 | 78.6 | 88.6 | 98.6 |
| 0.87 | 58.7 | 68.7 | 78.7 | 88.7 | 98.7 |
| 0.88 | 58.8 | 68.8 | 78.8 | 88.8 | 98.8 |
| 0.89 | 58.9 | 68.9 | 78.9 | 88.9 | 98.9 |
| 0.90 | 59.0 | 69.0 | 79.0 | 89.0 | 99.0 |

| **ಓಜಿಪಿಎ** | **5** | **6** | **7** | **8** | **9** |
|---|---|---|---|---|---|
| 0.91 | 59.1 | 69.1 | 79.1 | 89.1 | 99.1 |
| 0.92 | 59.2 | 69.2 | 79.2 | 89.2 | 99.2 |
| 0.93 | 59.3 | 69.3 | 79.3 | 89.3 | 99.3 |
| 0.94 | 59.4 | 69.4 | 79.4 | 89.4 | 99.4 |
| 0.95 | 59.5 | 69.5 | 79.5 | 89.5 | 99.5 |
| 0.96 | 59.6 | 69.6 | 79.6 | 89.6 | 99.6 |
| 0.97 | 59.7 | 69.7 | 79.7 | 89.7 | 99.7 |
| 0.98 | 59.8 | 69.8 | 79.8 | 89.8 | 99.8 |
| 0.99 | 59.9 | 69.9 | 79.9 | 89.9 | 99.9 |
| - | - | - | - | - | - |